ಜನಪದ ವಿಚಾರ

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೬ ಡಿಸೆಂಬರ್-೨೦೦೫ ಸಂಚಿಕೆ-೫



ಡಿಸೆಂಬರ್ ಮಾಹೆಯ ನಾಲ್ಕು ದೀಪಗಳು

ಸಿ. ರಾಜಗೋಪಾಲಚಾರಿ,

ಡಾ॥ ಬಾಬು ರಾಜೇಂದ್ರ ಪ್ರಸಾದ್,

ಕುವೆಂಪು, ಬಾಬಾ ಆಮಟೆ

ಜನಪದ ವಿಚಾರದಲ್ಲಿ

ಡಿಸೆಂಬರ್-೨೦೦೫.

ಜನಪದ ವಿಚಾರ
ತಿಂಗಳ ವೈಚಾರಿಕ ಡೈಜೆಸ್ಟ್

ಡಿಸೆಂಬರ್-೨೦೦೫
ಸಂಪುಟ-೬
ಸಂಚಿಕೆ-೫

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧ ೪೩೧
ಮಂಡ್ಯ ಜಿಲ್ಲೆ

(08236)298754
e-mail-janapada@yahoo.com
www.janapada.org

ಬನ್ನಿ ಬನ್ನಿ ಕನಸುಗಳೇ!

ಬನ್ನಿ ಬನ್ನಿ ಕನಸುಗಳೇ
ಮರಳಿ ಮನೆಗೆ ಬನ್ನಿ
ಹಸುಳೆತನದ ನಸುನಗೆಯಲಿ
ಹುಸಿಗತೆಗಳ ಹೊಸ ಜಗದಲಿ
ಬಣ್ಣಗೊಂಡು ಬಗೆ ಬಗೆಯಲಿ
ಕಣ್ಣು ಚಿವುಟಿ ಕರೆದುಹೋದ
ಕನಸುಗಳೇ ಬನ್ನಿ
ಹೇ! ಮಾತಾಡುವ ಗಿಣಿಗಳಿರಾ
ಪೂತಿಹ ಪೆಣ್ಮಣಿಗಳಿರಾ
ಸಾಸದರಸು ಕುವರರೇ
ಲೇಸಗಳಿಸಿದಮರರೇ
ಮುಚ್ಚಿಕೊಂಡ ಕನಸುಗಳೇ
ಬಿಚ್ಚಿ ಬಿಡಿಸಿ ಬನ್ನಿ
ಹರೆಯದ ತೆರೆತೆರೆಗಳಲ್ಲಿ
ಅರೆತೆರೆದಿಹ ಮರೆಗಳಲ್ಲಿ
ಎದೆಯ ಮುದದ ತೊರೆಗಳಲ್ಲಿ
ಸುಧೆಯ ಕುಡಿದ ಹಕ್ಕಿ ಜಿಂಕೆ
ಕನಸುಗಳೇ ಬನ್ನಿ

-ಅಂಬಿಕಾತನಯದತ್ತ

ವಿಚಾರ ದೀಪ್ತಿ

ಮನುಷ್ಯನಿಗೆ ಸಾಮಾನ್ಯ ಜ್ಞಾನ ಬಹಳ ಮುಖ್ಯ. ಎಲ್ಲಿ, ಏನನ್ನು ಮತ್ತು ಯಾವ ಸಂದರ್ಭದಲ್ಲಿ ಮಾತಾಡಬೇಕು ಎಂಬುದರ ಬಗ್ಗೆ ಪರಿಜ್ಞಾನ ಇಲ್ಲದಿದ್ದರೆ ಬಹಳ ಯಡವಟ್ಟಾಗುತ್ತದೆ. ಮಾತನಾಡಿದವರು ಮತ್ತು ಅದನ್ನು ಕೇಳಿದವರು ಇಬ್ಬರೂ ಮುಜುಗರಕ್ಕೆ ಒಳಗಾಗಬೇಕಾಗುತ್ತದೆ.

ಈ ಕಾಮನ್‌ಸೆನ್ಸ್‌ಗೂ ರಾಜಕಾರಣಿಗಳಿಗೂ ಎಣ್ಣೆ-ಸೀಗೆಕಾಯಿ ಸಂಬಂಧ. ಬಹುತೇಕ ರಾಜಕಾರಣಿಗಳಿಗೆ ಈ ಪದ ಅಪಥ್ಯ. ಏಕೆಂದರೆ ಇವರದು ಮೊದಲು ಕ್ರಿಯೆ, ಆಮೇಲೆ ಯೋಚನೆ. ಯೋಚಿಸಿದ ನಂತರ ಕಾರ್ಯಕ್ಕೆ ಇಳಿಯುವವರು ತೀರಾ ವಿರಳ.

ಒಂದಷ್ಟು ವರ್ಷದಿಂದ ಬೆಂಗಳೂರಿಗೂ ಮಳೆಗೂ ಸವತಿ ಮಕ್ಕಳ ಸಂಬಂಧ ಇತ್ತು. ಹೀಗಾಗಿ ಅದರ ಆರ್ಭಟ ತರುವ ಆಪತ್ತುಗಳ ಅರಿವು ಯಾರಿಗೂ ಇರಲಿಲ್ಲ. ಕೆರೆ, ಮೋರಿ ಎನ್ನದೆ ಎಲ್ಲ ಜಾಗವನ್ನೂ ನುಂಗಿ ಕಟ್ಟಡಗಳು ಮೇಲೆದ್ದಿದ್ದವು. ಮಳೆ ಸುರಿದಾಗ ನೀರು ಕೆರೆಯಲ್ಲೇ ನಿಲ್ಲಬೇಕು, ಮೋರಿಯಲ್ಲೇ ಹರಿಯಬೇಕು. ಹೀಗಾಗಿ ಕೆರೆ, ಮೋರಿ, ಜಾಗದಲ್ಲಿದ್ದ ಮನೆ-ಮಠಗಳೂ ಸಹಜವಾಗಿಯೇ ಮಳೆ ನೀರಿನ ಅಂಗಳಗಳಾದವು. ಕೆರೆಯಲ್ಲಿ ಮನೆ ಇತ್ತು. ಮನೆಯಲ್ಲಿ ಕೆಸರಿತ್ತು. ಮಳೆ, ಮೋರಿ ಎಲ್ಲ ನೀರು ಅಲ್ಲಿ ಸೇರಿತ್ತು.

ಹೀಗೆ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಪ್ರತಿಷ್ಠಿತ ಎಚ್‌ಎಸ್‌ಆರ್ ಲೇಔಟ್ ಕೂಡ ಒಂದು. ಇಲ್ಲಿ ವಾಸಿಸುತ್ತಿರುವವರಲ್ಲಿ ಬಹುತೇಕರು ಶ್ರೀಮಂತರು. ಆಡಳಿತ ಮತ್ತು ಪ್ರತಿಪಕ್ಷದ ಪ್ರತಿನಿಧಿಗಳು ಪ್ರತ್ಯೇಕವಾಗಿ ಮತ್ತು ಒಟ್ಟೊಟ್ಟಿಗೆ ಈ ನೆರೆ ಪೀಡಿತ ಪ್ರದೇಶಗಳಿಗೆ 'ಪ್ರವಾಸ' ಹಾಕಿಕೊಂಡರು. ಸಾಂತ್ವನ ಹೇಳುವ ಕಾರ್ಯಕ್ರಮ ಅದಾಗಿತ್ತು. ಎಚ್‌ಎಸ್‌ಆರ್ ಬಡಾವಣೆಗೆ ಬಂದ ರಾಜಕೀಯ 'ಧುರೀಣರು' ಅಲ್ಲಿರುವ ಜನರಿಗೆ ಊಟ, ಬಟ್ಟೆ ವ್ಯವಸ್ಥೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಇದನ್ನು ಕೇಳಿದ ಜನ ಗಾಬರಿ ಬಿದ್ದು ಹೋದರು. ಬಳಿಕ ಸಾವರಿಸಿಕೊಂಡು ಹೇಳಿದರು: ಸ್ವಾಮಿ, ದೇವರು ಊಟ,-ಬಟ್ಟೆಗೆ ನಮಗೇನೂ ತೊಂದರೆ ಮಾಡಿಲ್ಲ. ಮನೆಗಳ ಒಳಗೆ ನಿಂತಿರುವ ನೀರು-ಕೆಸರು ದಯವಿಟ್ಟು ಖಾಲಿ ಮಾಡಿಸಿ ಪುಣ್ಯ ಕಟ್ಟಿಕೊಳ್ಳಿ'. ರಾಜಕಾರಣಿಗಳಿಗೆ ಆಗಷ್ಟೆ ಜ್ಞಾನೋದಯವಾಯಿತು. ನಾವು ಬಂದಿರುವುದು ಕುಬೇರರ ಬಡಾವಣೆಗೆ ಎಂಬುದು. ಇದಾದ ನಂತರ ರಾಜಕಾರಣಿಗಳ ದಂಡು ಬಡ ಬಗ್ಗರು ವಾಸಿಸುವ ಕೊಳಗೇರಿಗಳತ್ತ ಪ್ರಯಾಣ ಬೆಳಸಿತು. ಕುಬೇರರ ಬಡಾವಣೆಯಲ್ಲಿ ಆಗಿದ್ದ ಜ್ಞಾನೋದಯವನ್ನು ಅಲ್ಲಿ ಪ್ರದರ್ಶಿಸಿತು. ಇವರ ಗುಡಿಸಲುಗಳಲ್ಲಿರುವ ನೀರು-

(೨೩ನೇ ಪುಟಕ್ಕೆ ಮುಂದುವರೆದಿದೆ .....)

ಡಿಸೆಂಬರ್ ಮಾಹೆಯ ನಾಲ್ಕು ದೀಪಗಳು

–ಸುರೇಂದ್ರ ಕೌಲಗಿ

ಕಾರ್ತಿಕ ಮಾಸದ ಬೆಳಕನ್ನು ತನ್ನ ಒಡಲೊಳಗೆ ಇಟ್ಟುಕೊಂಡಿರುವ ಡಿಸೆಂಬರ್ ಮಾಹೆ ನಾಲ್ಕು ಮಹಾನ್ ಚೇತನಗಳಿಗೆ ಜನ್ಮಕೊಟ್ಟ ಮಾಹೆಯೂ ಆಗಿದೆ. ಈ ಚೇತನಗಳು ಭಾರತ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಸದಾ ಬೆಳಗುತ್ತಿರುವ ದೀಪಗಳಾಗಿವೆ ಈ ನಾಲ್ಕು ಮಹಾನ್ ಚೇತನಗಳ ಜೀವನದ ಪರಿಚಯವನ್ನು ಮಾಡಿಕೊಳ್ಳದೆ ದೇಶದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸವನ್ನು ಸರಿಯಾದ ಅರ್ಥದಲ್ಲಿ ಮತ್ತು ಬೆಳಕಿನಲ್ಲಿ ತಿಳಿದುಕೊಳ್ಳಲು ಸಾಧ್ಯವಿಲ್ಲ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಾತ್ಮ ಗಾಂಧಿಯವರ ಪಾತ್ರ ಅದ್ವಿತೀಯವಾಗಿತ್ತಾದರೂ ನೂರಾರು ತೊರೆಗಳು ಸೇರಿ ಸಾಗರವಾಗುವಂತೆ ನೂರಾರು ಇತರ ದೇಶಪ್ರೇಮಿಗಳ ತ್ಯಾಗ ಬಲಿದಾನಗಳಿಂದ ಅವರ ಚಿಂತನೆಗಳಿಂದ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಗಾಂಧಿಯುವರು ಅನೇಕ ಸ್ವಾತಂತ್ರ್ಯ ಹೋರಾಟಗಾರರ ಜೀವನಕ್ಕೆ ಮಾರ್ಗದರ್ಶಕರಾಗಿದ್ದಂತೆ ಇತರ ಹಲವಾರು ಮಹನಿಯರು ಗಾಂಧಿಯವರಿಗೂ ತಮ್ಮ ತಮ್ಮ ನೆಲೆಯಲ್ಲಿ ಮಾರ್ಗದರ್ಶಕರಾಗಿ, ಸಲಹಾಗಾರರಾಗಿ ಕೆಲಸ ಮಾಡಿದ್ದರು ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಗಾಂಧೀ ಎದುರಿಸಿದ್ದ ವಿವಿಧ ಸಮಸ್ಯೆಗಳಿಗೆ ಇಂಥ ಮಹನಿಯರಿಂದ ಗಾಂಧೀ ಸಲಹೆಯನ್ನು ಪಡೆದಿದ್ದರು. ಆದ್ದರಿಂದ ದೇಶದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದ ಅಧ್ಯಯನ ಕೇವಲ ಗಾಂಧೀಯವರ ಜೀವನ ಚರಿತ್ರೆಯನ್ನು ಮಾತ್ರ ಓದುವುದರಿಂದ ಪೂರ್ಣಗೊಳ್ಳುವುದಿಲ್ಲ. ಆ ಕಾಲಕ್ಕೆ ಚಳುವಳಿಯಲ್ಲಿ ಭಾಗವಹಿಸಿದ್ದ ಪ್ರಮುಖ ನಾಯಕರ ಜೀವನ ಚರಿತ್ರೆಯನ್ನೂ ಓದಿ ಅವರ ವಿಚಾರಗಳನ್ನು ತಿಳಿದುಕೊಂಡಾಗ ಮಾತ್ರ ಸ್ವಾತಂತ್ರ್ಯಚಳುವಳಿಯ ಇತಿಹಾಸದ ಅಧ್ಯಯನಕ್ಕೆ ಒಂದು ಅರ್ಥ ಬರುತ್ತದೆ ನಮಗೆ ಆ ಇತಿಹಾಸದ ದಿವ್ಯತೆ ಮತ್ತು ಭವ್ಯತೆ ಗೋಚರಿಸುತ್ತದೆ. ಗಾಂಧೀಯವರ ಸಮಕಾಲೀನರಾಗಿ ಚಳುವಳಿಯುಲ್ಲಿ ಭಾಗವಹಿಸಿ ಕಾರಾಗೃಹ ವಾಸವನ್ನು ಅನುಭವಿಸಿ ರಾಷ್ಟ್ರನಾಯಕರಾಗಿರುವ ಇಬ್ಬರು ಮಹಾನ್ ವ್ಯಕ್ತಿಗಳು ಈ ಡಿಸೆಂಬರ್ ಮಾಹೆಯಲ್ಲಿ ಜನ್ಮವೆತ್ತಿದ್ದಾರೆ. ಹಾಗೆಯೆ ಈ ಮಾಹೆಯಲ್ಲಿಯೆ ದೇಶದ ದೊಡ್ಡ ಸಮಾಜ ಸೇವಕರಾದ ಬಾಬಾ ಆಮಟೆ ಮತ್ತು ರಾಷ್ಟ್ರಕವಿ ಕುವೆಂಪುರವರು ಸಹ ಜನ್ಮತಾಳಿದ್ದಾರೆ. ಸಿ. ರಾಜಗೋಪಾಲಚಾರಿ, ಡಾ॥ ಬಾಬು ರಾಜೇಂದ್ರ ಪ್ರಸಾದ್, ಕುವೆಂಪು, ಬಾಬಾ ಆಮಟೆ ಡಿಸೆಂಬರ್ ಮಾಹೆಯಲ್ಲಿ ನಾಲ್ಕು ದೀಪಗಳಾಗಿ ಪ್ರಜ್ವಲಿಸುತ್ತಿದ್ದಾರೆ.

ರಾಜಾಜಿ ಎಂದು ಪ್ರಸಿದ್ಧಿ ಪಡೆದಿರುವ ಚಕ್ರವರ್ತಿ ಸಿ. ರಾಜಗೋಪಾಲಚಾರಿಯವರು ಭಾರತದ ಸ್ವಾತಂತ್ರ್ಯಪೂರ್ವ ರಾಜಕಾರಣದ ಚಾಣಕ್ಯನೆಂದು ಕರೆಸಿಕೊಂಡಿದ್ದರು.

ಚಾಣಕ್ಯನು ಕ್ಲಿಷ್ಟ ಸಮಸ್ಯೆಗಳಿಂದ ಹೊರಬೀಳುವ ಉಪಾಯವನ್ನು ಕಂಡು ಕೊಳ್ಳುತ್ತಿದ್ದಂತೆ ರಾಜಾಜಿಯವರು ಆಗಾಗ್ಗೆ ಉದ್ಭವಿಸುತ್ತಿದ್ದ ಕ್ಲಿಷ್ಟ ರಾಜಕೀಯ ಸಮಸ್ಯೆಗಳಿಂದ ಹೊರ ಬರಲು ಗಾಂಧೀಗೂ, ಕಾಂಗ್ರೆಸ್ ಕಾರ್ಯಕಾರಣಿ ಸಮಿತಿಗಳಿಗೂ ಸಲಹೆಗಳನ್ನು ಕೊಡುತ್ತಿದ್ದರು. ರಾಜಾಜಿಯವರು ಕೊಡುತ್ತಿದ್ದ ಸಲಹೆಗಳು ವಿಫಲಗೊಳ್ಳದೆ ಎಲ್ಲರ ಮನಸ್ಸಿಗೆ ಸಂತೋಷವನ್ನು ಮತ್ತು ನೆಮ್ಮದಿಯನ್ನು ತಂದು ಕೊಡುತ್ತಿದ್ದವು. ಇದಕ್ಕೆ ಮುಖ್ಯ ಕಾರಣ ರಾಜಾಜಿ ಗಾಂಧೀಜಿಯವರನ್ನು ಮತ್ತು ಆಗಿನ ಕಾಲದ ರಾಷ್ಟ್ರೀಯ ನಾಯಕರನ್ನು ಚೆನ್ನಾಗಿ ಅರ್ಥಮಾಡಿಕೊಂಡಿದುದೆ ಆಗಿತ್ತು. ಗಾಂಧೀಜಿಯವರನ್ನು ಪೂರ್ತಿಯಾಗಿ ಅರ್ಥಮಾಡಿಕೊಂಡಿದ್ದ ವ್ಯಕ್ತಿಯೆಂದರೆ ರಾಜಾಜಿ ಎಂಬುದಾಗಿ ಗಾಂಧೀಯವರ ನಿಕಟವರ್ತಿಯಾಗಿದ್ದ ಸಿ. ಎಸ್.ಆ್ಯಂಡ್ರೂಸ್ ಹೇಳುತ್ತಿದ್ದರು.

ರಾಜಾಜಿಯವರಲ್ಲಿ ಸಮಸ್ಯಾ ವಿಶ್ಲೇಷಣಾ ಬುದ್ಧಿ ಬಹು ತೀಕ್ಷ್ಣವಾಗಿತ್ತು. ಪ್ರತಿಯೊಂದು ವಿಷಯವನ್ನು ಅದರ ಹಿನ್ನಲೆಯನ್ನು ಗಮನದಲ್ಲಿಟ್ಟುಕೊಂಡು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಆದ್ದರಿಂದ ರಾಜಾಜಿಯವರು ಎಂಥ ದೊಡ್ಡ ವ್ಯಕ್ತಿಯ ಎದುರಿನಲ್ಲಿದ್ದರೂ ತಮ್ಮ ವೈಚಾರಿಕ ಶಕ್ತಿ ಕುಂಠಿತಗೊಳ್ಳಲು ಅವಕಾಶ ಕೊಡುತ್ತಿರಲಿಲ್ಲ ಬದಲಿಗೆ ಇನ್ನೂ ಹೆಚ್ಚು ತೀಕ್ಷ್ಣವಾಗಿ ಆಲೋಚನೆ ಮಾಡಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರು. ಸಾಮಾನ್ಯವಾಗಿ ಗಾಂಧೀಜಿಯವರ ಉಪಸ್ಥಿತಿಯಲ್ಲಿ ವಲ್ಲಭಬಾಯಿ ಪಟೇಲ್ ಮತ್ತು ನೆಹರುರಂಥವರೂ ಕೂಡ ಕೆಲವೊಂದು ಸಲ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು ಹಿಂಜರಿಯುತ್ತಿದ್ದರು. ಸರ್ದಾರ ಪಟೇಲರಂತೂ ತೀರ್ಮಾನ ಕೈಗೊಳ್ಳುವ ಜವಾಬ್ದಾರಿಯನ್ನು ಗಾಂಧೀಜಿಯವರಿಗೆ ಬಿಟ್ಟುಕೊಟ್ಟು ಸುಮ್ಮನಿರುತ್ತಿದ್ದರು. ಅವರೆ ಹೇಳಿಕೊಂಡಂತೆ "ತೀರ್ಮಾನ ಗಾಂಧೀಜಿಗೆ ಸೇರಿದ್ದು; ಅದನ್ನು ಕಾರ್ಯಗತಗೊಳಿಸುವುದಷ್ಟೆ ನನಗೆ ಸೇರಿದ್ದು." ಆದರೆ ರಾಜಾಜಿಯವರದು ಇದಕ್ಕೆ ವ್ಯತಿರಿಕ್ತವಾದ ಸ್ವಭಾವ. ನೆಹರುರವರು ಈ ವಿಷಯವಾಗಿ ಹೀಗೆ ಹೇಳಿದ್ದಾರೆ, "ನಮ್ಮೆಲ್ಲರ ಪ್ರಜ್ಞೆ ಮಹಾತ್ಮಾಜಿಯವರ ಸಾನಿಧ್ಯದಲ್ಲಿ ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ ಆದರೆ ರಾಜಾಜಿಯವರ ಪ್ರಜ್ಞೆ ಸದಾ ಜಾಗೃತವಾಗಿರುತ್ತಿತ್ತು. ಆದ್ದರಿಂದ ಪ್ರತಿಯೊಂದು ಪ್ರಶ್ನೆಯನ್ನು ರಾಜಾಜಿ ತಮ್ಮ ತೀಕ್ಷ್ಣ ಹಾಗೂ ವಿಶ್ಲೇಷಣಾತ್ಮಕ ಬುದ್ಧಿಯಿಂದ ತೂಗಿ ನೋಡುತ್ತಿದ್ದರು."

'ನೆಹರೂರ ಈ ಮಾತನ್ನು ಸಮರ್ಥಿಸುವಂತೆಯೊ ಏನೋ ಎಂಬಂತೆ ಗಾಂಧೀಜಿ ಸ್ವತಃ ರಾಜಾಜಿಯವರ ಬಗ್ಗೆ ಹೀಗೆ ಹೇಳಿದ್ದಾರೆ, "ರಾಜಾಜಿ ನನ್ನ ಅತಿ ಹಳೆಯ ಮಿತ್ರರು; ನನ್ನ ಜೀವನವು ಯಾವ ತತ್ವ ಮತ್ತು ಮೌಲ್ಯಗಳಿಗಾಗಿ ಮೀಸಲಾಗಿದಿಯೊ ಅವುಗಳನ್ನು ಕಾಯಾ, ವಾಚಾ ಎತ್ತಿ ಹಿಡಿಯುವುದರಲ್ಲಿ ಅಗ್ರಗಣ್ಯರಾಗಿದ್ದಾರೆ." ೧೯೩೨ ರಲ್ಲಿ ಬ್ರಿಟೀಷರು ಘೋಷಿಸಿದ್ದ ಕಮ್ಯುನಲ್ ಅವಾರ್ಡ ವಿರುದ್ಧ ಗಾಂಧೀಯವರು ಆಮರಣ ಉಪವಾಸವನ್ನು ಕೈಗೊಂಡಿದ್ದರು.

ಈ ಕಮ್ಯೂನಲ್ ಅವಾರ್ಡ್‌ನ ಉದ್ದೇಶ ಶಾಸನಸಭೆಗಳಲ್ಲಿ ಮೀಸಲು ಸ್ಥಾನಗಳನ್ನೇರ್ಪಡಿಸಿ ಹರಿಜನರ ಬೆಂಬಲವನ್ನು ಪಡೆಯುವುದಾಗಿತ್ತು. ಗಾಂಧೀಯವರ ಆಮರಣ ಉಪವಾಸದ ಸುದ್ದಿಯಿಂದ ದೇಶ ತಲ್ಲಣಗೊಂಡಿತು. ಆಗ ಗಾಂಧೀ ಯರವಾಡ ಜೈಲಿನಲ್ಲಿದ್ದರು. ಆಮರಣ ಉಪವಾಸದ ನಿರ್ಣಯದಿಂದ ಗಾಂಧೀಯವರನ್ನು ವಿಮುಖರನ್ನಾಗಿ ಮಾಡುವುದು ಹೇಗೆ ಎಂಬ ಪ್ರಶ್ನೆ ಎಲ್ಲ ನಾಯಕರನ್ನು ಕಾಡಹತ್ತಿತು. ಏಕೆಂದರೆ ಗಾಂಧೀಯವರು ಯಾರ ಒತ್ತಡಕ್ಕೂ ಮಣಿಯುವಂಥವರಲ್ಲ ಅಂಥ ಸಂದರ್ಭದಲ್ಲಿ ಗಾಂಧೀಯವರನ್ನು ತರ್ಕಬದ್ಧ ವಾದದಿಂದಲೆ ಜಯಿಸಬೇಕಾಗಿತ್ತು. ಇಂಥ ಕಾರ್ಯಕ್ಕೆ ರಾಜಾಜಿಯವರಲ್ಲದೆ ಬೇರೆ ಯಾರು ತಾನೆ ಮುಂದೆ ಬಂದಾರು? ಉಪವಾಸದ ಸುದ್ದಿ ತಿಳಿದ ತಕ್ಷಣ ರಾಜಾಜಿ ಯರವಾಡ ಕಾರಾಗೃಹಕ್ಕೆ ಧಾವಿಸಿದರು ಗಾಂಧೀಯವರನ್ನು ಅಲ್ಲಿ ಭೇಟಿಮಾಡಿ ಅವರನ್ನು ಹೀಗೆ ಪ್ರಶ್ನಿಸಿದರು. "ನೀವು ಸತ್ಯದಲ್ಲಿ ಕಠೋರ ನಿಷ್ಠೆಯುಳ್ಳವರು. ಬಾಯಿಯಿಂದ ಮಾತು ಹೊರಬಿದ್ದ ಮೇಲೆ ಅದರಂತೆ ನಡೆದೆ ತೀರುವವರು. ಈಗ ಆಮರಣ ಉಪವಾಸ ಮಾಡುವುದಾಗಿ ಪ್ರಕಟಪಡಿಸಿದ್ದೀರಿ. ನಿಮ್ಮ ಜೀವ ಈ ರಾಷ್ಟ್ರದ ಸ್ವತ್ತು. ನಿಮ್ಮ ಜೀವವನ್ನೆ ಪಣಕ್ಕಿಡುವ ಇಂಥ ನಿರ್ಧಾರವನ್ನು ಕೈಗೊಳ್ಳುವ ಮೊದಲು ಯಾರೊಡನೆಯಾದರೂ ಸಮಾಲೋಚಿಸಿದ್ದೀರಾ?" ಇಂಥ ಪ್ರಶ್ನೆಯನ್ನು ಗಾಂಧೀಜಿ ನಿರೀಕ್ಷಿಸಿರಲಿಲ್ಲ. ಆಗ ಗಾಂಧೀಜಿ "ದೇವರಮೇಲೆ ಭಾರಹಾಕಿ ಈ ನಿರ್ಧಾರ ಮಾಡಿದ್ದೇನೆ. ಇನ್ನು ಅವನ ಇಚ್ಛೆಯಂತೆ ಆಗಲಿ ಎಂದರು. ಅದಕ್ಕೆ ಉತ್ತರವಾಗಿ ರಾಜಾಜಿ ಇನ್ನೊಂದು ಪ್ರಶ್ನೆಯನ್ನು ಕೇಳಿದರು. ನಿಮ್ಮ ಮನಸ್ಸಿಗೆ ಬಂದದ್ದೆಲ್ಲವನ್ನು ದೇವರ ಅನುಜ್ಞೆ ಎನ್ನುವುದು ಸರಿಯಾದೀತೆ ಎಂದು. ಆಗ ಗಾಂಧೀಜಿ, "ನಾನು ನಿಮ್ಮ ಪ್ರಶ್ನೆಯಿಂದಾಗಿ ಸ್ವಲ್ಪ ಕೋಪಗೊಂಡಿದ್ದೆ ಯೋಚಿಸಿ ನೋಡಿದಾಗ ನೀವು ಆಕ್ಷೇಪಿಸಿದ್ದರಲ್ಲಿ ನ್ಯಾಯವಿದೆಯೆಂದು ಮನವರಿಕೆಯಾಯಿತು" ಎಂದು ಉತ್ತರಿಸಿದರು.

ರಾಜಾಜಿಯವರು ಗಾಂಧೀಜಿಯವರು ಪ್ರತಿಪಾದಿಸಿದ್ದ ಖಾದಿ, ಅಸ್ಪ್ರಶ್ಯತಾ ನಿವಾರಣೆ, ಹರಿಜನೋದ್ಧಾರ, ಮದ್ಯಪಾನ ನಿಷೇಧ, ಸತ್ಯಾಗ್ರಹ ಮುಂತಾದ ಎಲ್ಲ ಕಾರ್ಯಕ್ರಮಗಳಲ್ಲಿ ತುಂಬಾ ನಂಬಿಕೆಯಿಂದ ಮತ್ತು ನಿಷ್ಠೆಯಿಂದ ಕೆಲಸ ಮಾಡಿದವರಾಗಿದ್ದರು. ಸೇಲಂ ಎಂಬ ಪುಟ್ಟ ನಗರದ ಪುರಸಭಾಧ್ಯಕ್ಷ ಸ್ಥಾನದಿಂದ ಮೇಲಕ್ಕೇರುತ್ತಾ ಏರುತ್ತಾ ಸ್ವತಂತ್ರ ಭಾರತದ ಪ್ರಥಮ ಗವರ್ನರ್ ಜನರಲ್ ಪದವಿಗೆ ತಲುಪಿದ ರಾಜಾಜಿಯವರ ಜೀವನ ವರ್ಣಮಯ, ಕ್ರಿಯಾಮಯ, ವಿಚಾರಮಯವಾಗಿತ್ತು.

ಡಾ॥ ಬಾಬು ರಾಜೇಂದ್ರ ಪ್ರಸಾದ್ ಭಾರತದ ಪ್ರಥಮ ರಾಷ್ಟ್ರಪತಿ ಎಂಬುದು ಎಲ್ಲರಿಗೂ ತಿಳಿದ ವಿಷಯ. ರಾಷ್ಟ್ರಪತಿ ಭವನವನ್ನು ಅಲಂಕರಿಸಿದ್ದ ವ್ಯಕ್ತಿ ಎಷ್ಟು ಸಜ್ಜನ, ಎಷ್ಟು ಮಿತಭಾಷಿ, ಎಷ್ಟು ಸರಳ ಎಂಬುದನ್ನು ತಿಳಿಯಬೇಕಾದರೆ ಅವರ ಜೀವನ ಚರಿತ್ರೆಯನ್ನಾಗಲಿ ಅಥವಾ ಆತ್ಮಚರಿತ್ರೆಯನ್ನಾಗಲಿ ಓದ ಬೇಕು. ಎಲೆಮರೆ

ಕಾಯಿಯಂತೆ ಇರಲು ಬಯಸುತ್ತಿದ್ದ ರಾಜೇಂದ್ರ ಪ್ರಸಾದರನ್ನು ಓರ್ವ ಸಮರ್ಥ ನಾಯಕನನ್ನಾಗಿ ರೂಪಿಸಿ ದೇಶಕ್ಕೆ ಅರ್ಪಿಸಿದವರು ಗಾಂಧೀ. ೧೯೧೮ರಲ್ಲಿ ಗಾಂಧೀಜಿಯವರು ಬಿಹಾರಿನ ಚಂಪಾರಣ್ಯ ಜಿಲ್ಲೆಯಲ್ಲಿ ರೈತರ ಪರವಾಗಿ ನಡೆಸಿದ್ದ ಸತ್ಯಾಗ್ರಹದ ಸಮಯದಲ್ಲಿ ರಾಜೇಂದ್ರ ಪ್ರಸಾದರು ಗಾಂಧೀಜಿಯವರ ಪ್ರಭಾವಲಯಕ್ಕೆ ಒಳಗಾದರು. ಉತ್ತಮ ಆರ್ಥಿಕ ಸ್ಥಿತಿಯಲ್ಲಿದ್ದ ತಮ್ಮ ವಕೀಲಿ ವೃತ್ತಿಯನ್ನು ಬಿಟ್ಟು ಸ್ವಾತಂತ್ರ್ಯ ಆಂದೋಲನದಲ್ಲಿ ಧುಮುಕಿದರು. ಅಂದಿನಿಂದ ರಾಷ್ಟ್ರಪತಿಯಾಗುವ ವರೆಗೂ ದೇಶದ ಹಿತಕ್ಕಾಗಿ ಚಿಂತನೆ ಮಾಡಿದರು ಮತ್ತು ಕೆಲಸ ಮಾಡಿದರು. ರಾಜೇಂದ್ರ ಪ್ರಸಾದರ ಜೀವನ ಶೈಲಿ ಎಷ್ಟು ಸರಳವಾಗಿತ್ತೆಂದರೆ ಅವರಿಗೆ ರಾಷ್ಟ್ರಪತಿ ಭವನವು ಒಂದು ಪ್ರಕಾರದ ಕಾರಾಗೃಹವೆಂದೆನಿಸುತ್ತಿತ್ತು. ಅವರೆಂದೂ ರಾಷ್ಟ್ರಪತಿಭವನದ ಸುಖವನ್ನು ಅನುಭವಿಸಲು ಇಷ್ಟಪಟ್ಟವರಲ್ಲ. ಅವರು ರಾಷ್ಟ್ರಪತಿಯಾದ ಕೂಡಲೆ ಸಂವಿಧಾನ ನಿಗದಿಮಾಡಿದ್ದ ವೇತನವನ್ನು ಕಡಿತಗೊಳಿಸಬೇಕೆಂದು ಆದೇಶವನ್ನಿತ್ತರು. ಬಹುಶಃ ಇಂಥ ಉದಾಹರಣೆ ಡಾ॥ ರಾಜೇಂದ್ರ ಪ್ರಸಾದರೊಂದಿಗೆ ಮುಕ್ತಾಯವಾಯಿತೇನೊ! ಸರ್ಕಾರಿ ಖರ್ಚು ಮತ್ತು ಸ್ವಂತ ಖರ್ಚು ಇವುಗಳ ವ್ಯತ್ಯಾಸವನ್ನು ಅವರು ಬಹಳ ಚೆನ್ನಾಗಿ ಅರಿತಿದ್ದರು. ಅವರು ರಾಷ್ಟ್ರಪತಿಯಾಗಿದ್ದಾಗ ಅವರ ಬಂಧುಗಳು ಅತಿಥಿಗಳಾಗಿ ಬಂದು ರಾಷ್ಟ್ರಪತಿ ಭವನದ ದೂರವಾಣಿಯನ್ನು ಉಪಯೋಗಿಸಿದಾಗ ಅದರ ಖರ್ಚನ್ನು ಸರ್ಕಾರದ ಲೆಕ್ಕಕ್ಕೆ ಹಾಕದೆ ತಮ್ಮ ಸ್ವಂತ ಹಣದಿಂದ ಅದನ್ನು ಭರಿಸುತ್ತಿದ್ದರು. ಚಂಪಾರಣ್ಯ ಸತ್ಯಾಗ್ರಹದ ಸಮಯದಲ್ಲಿ ರಾಜೇಂದ್ರ ಪ್ರಸಾದ್‌ರು ಅಸ್ಪೃಶ್ಯತೆ ಆಚರಣೆಯನ್ನು ಇನ್ನೂ ಇಟ್ಟುಕೊಂಡಿದ್ದರು. ಆಗ ಗಾಂಧೀಜಿ "ಅಡಿಗೆ ಮತ್ತು ಊಟಗಳಿಗೆ ಸಂಬಂಧಿಸಿದ ಪ್ರತ್ಯೇಕತೆ ಮುಂದುವರೆದಿದ್ದೇ ಆದರೆ ನಾವು ಸಾರ್ವಜನಿಕ ಕೆಲಸಗಳನ್ನು ಮುಂದುವರಿಸಲು ಸಾಧ್ಯವಿಲ್ಲ"ವೆಂದು ಹೇಳಿದರು. ಗಾಂಧಿಯವರ ಈ ಮಾತಿನ ಸತ್ಯತೆಯನ್ನು ಕೂಡಲೆ ಅರಿತುಕೊಂಡ ರಾಜೇಂದ್ರಪ್ರಸಾದರು ಮುಂದೆ ಸಂಪ್ರದಾಯ ಬದ್ಧತೆಯನ್ನು ತಿರಸ್ಕರಿಸಲು ಪ್ರಾರಂಭಿಸಿದರು. ತಮ್ಮ ಇಬ್ಬರು ಗಂಡು ಮಕ್ಕಳ ಮದುವೆಗಳಲ್ಲಿ ೫೧ ರೂಪಾಯಿಗಳಿಗಿಂತ ಹೆಚ್ಚು ವರದಕ್ಷಿಣೆಯನ್ನು ತೆಗೆದುಕೊಳ್ಳಲಿಲ್ಲವೆಂದರೆ ಸಾಮಾಜಿಕ ಪಿಡುಗುಗಳಲ್ಲಿದ್ದ ಅವರ ತಿರಸ್ಕಾರ ಮನೋಭಾವನೆ ಎಷ್ಟು ತೀವ್ರತರವಾಗಿತ್ತೆಂಬುದನ್ನು ಈ ಘಟನೆ ನಿಚ್ಚಳವಾಗಿ ತೋರಿಸುತ್ತದೆ. ಆದ್ದರಿಂದಲೇ ಡಾ॥ ರಾಜೇಂದ್ರಪ್ರಸಾದ್‌ರು ಯಾವುದು ಸರಿಯಲ್ಲವೊ ಅದು ಮಹತ್ವದಾಗಲೂ ಸಾಧ್ಯವಿಲ್ಲವೆಂದು ನಂಬಿ ಸಂವಿಧಾನ ರಚನಾ ಸಭೆಯ ಕಾರ್ಯಕಲಾಪಗಳನ್ನು ನಡೆಸಿದರು. ವೈಯಕ್ತಿಕ ಜೀವನದಲ್ಲಿ ಹಾಗೂ ಸಾರ್ವಜನಿಕ ಜೀವನದಲ್ಲಿ ಶುದ್ಧ ನಡತೆಗೆ ಹೆಚ್ಚು ಮಹತ್ವ ನೀಡುವಂತವರಾಗಿದ್ದರು. ವಿಶೇಷವಾಗಿ ಸಂವಿಧಾನಕ್ಕೆ ಸಂಬಂಧಿಸಿದ ಮತ್ತು ಪ್ರಜಾಸತ್ತಾತ್ಮಕ ವಿಷಯಗಳಲ್ಲಿ ಅವರು ಈ ಮನೋಭಾವನೆಯನ್ನು ಹೊಂದಿದ್ದರು. ಲಿಖಿತ ಸಂವಿಧಾನವನ್ನು ನಾವು ಅನುಸರಿಸಿದ್ದರೂ ಹೆದರಬೇಕಾಗಿಲ್ಲ. ಪ್ರಜಾಸತ್ತೆಯೊಡನೆ ಹೊಂದಿಕೊಂಡು ಹೋಗುವ

ಸತ್ ಸಂಪ್ರದಾಯವನ್ನು ನಾವು ನಮ್ಮ ದೇಶದಲ್ಲಿ ರೂಢಿಸಿಕೊಳ್ಳಬೇಕು. ರಾಜೇಂದ್ರ ಪ್ರಸಾದರಲ್ಲಿ ಮೆಚ್ಚುಗೆಯಾಗುವಂಥ ಗುಣವೆಂದರೆ ಇನ್ನೊಬ್ಬರು ಹೇಳುವುದನ್ನು ಅವರು ಯಾವಾಗಲೂ ಕೇಳಬಯಸುತ್ತಿದ್ದರು. ಸಂವಿಧಾನ ರಚನಾಂಗಕ್ಕೆ ಅಧ್ಯಕ್ಷರಾಗಿದ್ದಾಗ ಅವರಿಗೆ ಆಕರ್ಷಿಸಿದ ಒಂದು ವಿಷಯವೆಂದರೆ ನಮ್ಮ ಶಾಸಕರು ಮತ್ತು ಮತ ನೀಡುವವರಿಗೆ ಕನಿಷ್ಠ ಅರ್ಹತೆಗಳನ್ನು ಗೊತ್ತು ಪಡಿಸುವ ಸಾಧ್ಯತೆ. ಅವರನ್ನು ಯೋಚನೆಗೆ ಈಡುಪಡಿಸಿದ್ದ ಇನ್ನೊಂದು ವಿಷಯ ಯಾರು ಕಾನೂನನ್ನು ಮಾಡುವರೊ ಅವರು ಕಾನೂನನ್ನು ತಿಳಿದಿರಬೇಕಾಗಿಲ್ಲ ಎಂಬುದು! ಎಂಥ ದುರದೃಷ್ಟಕರ ಸಂಗತಿ, ಇಂಥ ವಿಷಯಗಳನ್ನು ಕುರಿತು ಅವರು ಸೈದ್ಧಾಂತಿಕ ನೆಲೆಯಲ್ಲಿ ಸ್ವಲ್ಪವೂ ಲೋಪ ಬರದಂತೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದರು. ರಾಜೇಂದ್ರ ಪ್ರಸಾದರು ಕೇವಲ ಕಾನೂನು ತಜ್ಞರಾಗಿರಲಿಲ್ಲ, ಶಿಕ್ಷಣ ತಜ್ಞರೂ ಆಗಿದ್ದರು. ಗಾಂಧೀಜಿಯವರು ಪ್ರತಿಪಾದಿಸಿದ್ದ ಜೀವನಶಿಕ್ಷಣ ಯೋಜನೆಯನ್ನು ಸಿದ್ಧಪಡಿಸಲು ರಚಿತವಾಗಿದ್ದ ಡಾ॥ ಝೂಕಿರ್‌ಹುಸೇನ್‌ರವರ ಅಧ್ಯಕ್ಷತೆಯ ಸಮಿತಿಯಲ್ಲಿ ಪ್ರಸಾದ್‌ರು ಸದಸ್ಯರಾಗಿದ್ದರು. ನಾವಿಂದು ದೇಶದಾದ್ಯಂತ ಕಾಣುತ್ತಿರುವ ಕೇಂದ್ರೀಯ ವಿದ್ಯಾಲಯಗಳ ಸ್ಥಾಪನೆಯ ವಿಚಾರಕ್ಕೆ ಡಾ॥ ಪ್ರಸಾದ್‌ರೇ ಮೂಲ ಕಾರಣ. ಡಾ॥ ರಾಜೇಂದ್ರ ಪ್ರಸಾದ್‌ರಲ್ಲಿ ಭಾರತೀಯ ಭಾಷೆಗಳಬಗ್ಗೆ ಅಪಾರವಾದ ಪ್ರೀತಿಯಿತ್ತು. ಅವರು ಬಂಗಾಳಿ ಭಾಷೆಯನ್ನು ಚನ್ನಾಗಿ ಕಲಿತರಲ್ಲದೆ ಕನ್ನಡವನ್ನೂ ಸಹ ಕಲಿಯಲು ಪ್ರಯತ್ನಿಸಿದ್ದರು.

ಕುವೆಂಪುರಂಥ ಕವಿಯೊಬ್ಬರು ಕನ್ನಡನಾಡಿನಲ್ಲಿ ಹುಟ್ಟದೆ ಹೋಗಿದ್ದರೆ ಮತ್ತು ಕನ್ನಡದಲ್ಲಿ ಸಾಹಿತ್ಯವನ್ನು ರಚಿಸದೆ ಹೋಗಿದ್ದರೆ ಕನ್ನಡದ ಸಾಹಿತ್ಯಿಕ ಸಿರಿವಂತಿಕೆ ಎಷ್ಟು ಶೂನ್ಯವಾಗುತ್ತಿತ್ತೆಂಬುದನ್ನು ಊಹಿಸಿದರೆ ಹೃದಯಾಘಾತವಾಗುತ್ತದೆ. ಕುವೆಂಪು ಇಲ್ಲದ ಕನ್ನಡವನ್ನು ಊಹಿಸುವುದು ಅಸಾಧ್ಯ, ಇಂಗ್ಲಿಷ್ ಭಾಷೆಯ ಶ್ರೇಷ್ಠ ಸಾಹಿತಿ ಷೇಕ್ಸ್‌ಪಿಯರ್ ನಂತರ ಒಬ್ಬ ಸಾಹಿತಿಯ ಬಗ್ಗೆ ವಿಮರ್ಶಾತ್ಮಕ, ತೌಲನಿಕ ಮತ್ತು ಅಧ್ಯಯನಶೀಲ ಸಾಹಿತ್ಯ ಅಗಾಧವಾದ ಪ್ರಮಾಣದಲ್ಲಿ ಪ್ರಕಟ ಗೊಂಡಿದ್ದರೆ ಅದು ಕುವೆಂಪು ಕುರಿತ ಸಾಹಿತ್ಯವೆಂದು ಹೇಳಬಹುದು. ಕುವೆಂಪು ಸಮಾಜದ ಹಿಂದುಳಿದವರ ಧ್ವನಿಯಾಗಿ ಅವರಿಗೆ ಸ್ವಾಭಿಮಾನವನ್ನೂ, ಸ್ಥಾನವನ್ನೂ, ಗೌರವವನ್ನೂ ತಂದುಕೊಟ್ಟಿದ್ದಾರೆ. ಗಾಂಧೀಜಿಯವರು ಪ್ರತಿಪಾದಿಸಿದ್ದ ಸರ್ವೋದಯ ಸಿದ್ಧಾಂತಕ್ಕೆ ತಮ್ಮ ವೈಚಾರಿಕ ಹಾಗೂ ನೈತಿಕ ಬೆಂಬಲವನ್ನು ಕೊಡುವುದರ ಮೂಲಕ ಕೊಳೆತು ನಾರುತ್ತಿರುವ ಇಂದಿನ ಸಮಾಜಕ್ಕೆ ಪರ್ಯಾಯವಾದ ಹೊಸಗಾಳಿಯ, ಹೊಸಬೆಳಕಿನ, ಹೊಸಚಿಂತನೆಯ ಸರ್ವೋದಯ ಸಮಾಜದ ಸ್ಥಾಪನೆಗೆ ಪ್ರೇರಣೆನೀಡಲು ಕಾರಣವಾಗಿದ್ದಾರೆ. ಅವರ ಸಾಹಿತ್ಯದಲ್ಲಿ ಏಕಕಾಲಕ್ಕೆ ಪ್ರಕೃತಿಯ ಪ್ರೇಮವನ್ನೂ, ಮಾನವ ಪ್ರೇಮವನ್ನೂ ಕಾಣುತ್ತೇವೆ. ದೇಶದ ಜೀವನಾಡಿಯಾಗಿರುವ ಯುವಕರನ್ನು

ಬಡಿದೆಬ್ಬಿಸುವುದರಲ್ಲಿ ಮತ್ತು ಅವರು ತಮ್ಮ ಆತ್ಮಶ್ರೀಯನ್ನು ಕಾಣಬೇಕೆಂಬ ಹಂಬಲದಲ್ಲಿ ಕುವೆಂಪು ಬೇರೆ ಯಾವುದೇ ಕ್ರಾಂತಿಕಾರನಿಗಿಂತ ಕಡಿಮೆಯಿಲ್ಲ. ಕುವೆಂಪು ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟರೆಂಬ ಕಾರಣಕ್ಕಾಗಿ ಅವರನ್ನು ಬಹಳ ಕೊಂಡಾಡುವುದುಂಟು. ಆದರೆ ಅವರು ಕನ್ನಡ ಸಾಹಿತ್ಯಕ್ಕಾಗಿ ಸಲ್ಲಿಸಿದ ಸೇವೆ ಯಾವ ಬೆಲೆಗೂ ಎಟುಕುವಂತದಲ್ಲ. ಒಂದು ವೇಳೆ ಅವರ ಸಾಹಿತ್ಯಕ್ಕೆ ನೊಬೆಲ್‌ಬಹುಮಾನ ಬಂದರೂ ಸಹ ಅದು ಕುವೆಂಪುರವರ ಸಾಹಿತ್ಯ ಸೇವೆಗೆ ಸಮಾನವಾದ ಬೆಲೆಯಾಗಲಾರದು. ೬ ಕೋಟಿ ಜನರ ಸಂಸ್ಕೃತಿ, ಅಭಿವ್ಯಕ್ತಿ ಮತ್ತು ವ್ಯಕ್ತಿತ್ವದ ಧಾರಣೆಗೆ ಹಾಗೂ ವಿಕಾಸಕ್ಕೆ ಕಾರಣವಾಗುವ ಕನ್ನಡ ಭಾಷೆಯ ಶ್ರೀಮಂತಿಕೆಯನ್ನು ಸರ್ವಾಂಗ ಸುಂದರವಾಗಿ ಬೆಳಸಿದ್ದಕ್ಕೆ ಯಾವ ಪ್ರಶಸ್ತಿ ಅಥವಾ ಗೌರವ ತಕ್ಕುದಾಗಬಲ್ಲದು? ಜಾಗತಿಕರಣದ ಹೊಡೆತದಲ್ಲಿ ಜರ್ಜರಿತವಾಗಬಹುದಾಗಿದ್ದ ಕನ್ನಡ ಭಾಷೆ ಪ್ರಪಂಚದ ಇತರ ಶ್ರೇಷ್ಠ ಭಾಷೆಗಳಿಗೆ ಸರಿಸಮಾನವಾಗಿ ನಿಲುವಂಥ ಸಾಮರ್ಥ್ಯ ಪಡೆದಿದ್ದರೆ ಅದಕ್ಕೆ ಕಾರಣ ಕುವೆಂಪು ವಿರಚಿತ ಸಾಹಿತ್ಯ. ಹಾಗೆಯೆ ಕನ್ನಡವನ್ನು ಶಾಸ್ತ್ರೀಯಭಾಷೆಯನ್ನಾಗಿ ಮಾಡಲೇಬೇಕೆಂದು ಕೇಂದ್ರಸರ್ಕಾರದ ಮೇಲೆ ಒತ್ತಡ ಹೇರುವಂಥ ದ್ರಾಷ್ಟ್ಯತನವು ಕನ್ನಡಿಗರಿಗೆ ಬಂದಿದ್ದರೆ ಅದಕ್ಕೆ ಕಾರಣ ಕುವೆಂಪು ನಿರ್ಮಿತ ಸಾಹಿತ್ಯ. ಕುವೆಂಪು ಶಿಕ್ಷಕರಾಗಿ, ಸಾಹಿತ್ಯಕಾರರಾಗಿ, ನಿಸರ್ಗ ಪ್ರೇಮಿಯಾಗಿ, ಮಾನವ ಪ್ರೇಮಿಯಾಗಿ, ದಲಿತರ ಧ್ವನಿಯಾಗಿ ಕ್ರಾಂತಿಕಾರರಾಗಿ ಕನ್ನಡದ ಮೂಲಕ ಮಾನವ ಕುಲದ ಗರಿಷ್ಠ ಏಳ್ಗೆಯ ಸಾಧ್ಯತೆಯ ವಿಶ್ವರೂಪ ದರ್ಶನವನ್ನು ನಮಗೆ ಮಾಡಿಸಿದ್ದಾರೆ. ಡಿಸೆಂಬರ್ ೨೯ರಂದು ರಲ್ಲಿ ಜನಿಸಿದ ಕುವೆಂಪು ಅನಂತ ಕಾಲದವರೆಗೆ ಡಿಸೆಂಬರ್ ಮಾಹೆಯನ್ನು ತಮ್ಮ ಧೀಮಂತಿಕೆಯ ಸಾಹಿತ್ಯದಿಂದ ಪ್ರಜ್ವಲಿಸುತ್ತಲೇ ಇರುತ್ತಾರೆ. ತನ್ನ ಮತ್ತು ತನ್ನ ಸಹೋದರರ ಭವಿಷ್ಯವನ್ನು ತೀರ್ಮಾನಿಸುವಂಥ ಯುದ್ಧ ಮಾಡಬೇಕಾದ ಸಮಯದಲ್ಲಿ ದಿಕ್ಕು ತೋಚದವನಾಗಿದ್ದ ಅರ್ಜುನನಿಗೆ ತನ್ನಲ್ಲಿಯ ವಿಶ್ವರೂಪವನ್ನು ತೋರಿಸುವುದರ ಮೂಲಕ ಕೃಷ್ಣನು ಅರ್ಜುನನ್ನು ಯುದ್ಧ ಸನ್ನದ್ಧನನ್ನಾಗಿ ಮಾಡಿದಂತೆ ಕುವೆಂಪು ಸಾಹಿತ್ಯವು ಇಂದು ಕನ್ನಡಿಗರಿಗೆ ಅವರ ನಾಡು-ನುಡಿಯ ಉಳಿಯುವಿಕೆಗಾಗಿ ಕರ್ತವ್ಯ ಸನ್ನದ್ಧರಾಗಿ ಮಾಡುತ್ತಿದೆ.

ಬಾಬಾ ಆಮಟೆ ಗಾಂಧೀಯವರ ರಚನಾತ್ಮಕ ಕಾರ್ಯದ ಕನಸಿನ ಪ್ರತ್ಯಕ್ಷ ಅವತಾರ. ಗಾಂಧೀಯವರ ೨೧ ರಚನಾತ್ಮಕ ಕಾರ್ಯಗಳಲ್ಲಿ ಕುಷ್ಠರೋಗದ ನಿವಾರಣೆ ಮತ್ತು ರೋಗಿಗಳ ಸೇವೆ ಬಹುಮುಖ್ಯವಾದುದು. ಗಾಂಧೀ ಸ್ವತಃ ತಮ್ಮ ಸೇವಾಗ್ರಾಮ ಆಶ್ರಮದಲ್ಲಿ ಪರ್ಚುರೆ ಶಾಸ್ತ್ರಿ ಎಂಬ ವಿದ್ವಾಂಸ ಕುಷ್ಠರೋಗಿಯ ಸೇವೆಯನ್ನು ಅವರ ಉಸಿರು ಇರುವವರೆಗೂ ಶ್ರದ್ಧೆಯಿಂದ ಮಾಡಿದರು. ಗಾಂಧೀಯವರ ಶಿಷ್ಯರಾದ ವಿನೋಬಾ ಭಾವೆಯವರು ಸ್ವತಃ ಕುಷ್ಠರೋಗಿಗಳೊಡನೆ ಸಹ ಜೀವನ ನಡೆಸಿ ತೋರಿಸಿದ್ದರು. ಏಸು ಬೀದಿಯ ಬದಿಯಲ್ಲಿ ಬಿದ್ದಿದ್ದ

ಕುಷ್ಠರೋಗಿಯೊಬ್ಬನ್ನನ್ನು ಮೈದಡವಿ ಅವನ ಹಣೆಗೆ ಮುತ್ತಿಕ್ಕಿ ಅವನ್ನನ್ನು ತನ್ನ ಪ್ರೇಮ ಸಾಮ್ರಾಜ್ಯಕ್ಕೆ ಕರೆದೊಯ್ದಿದ್ದನು. ಇಂಥ ವೈಭವದ ಸೇವಾ ಹಿನ್ನೆಲೆ ಇರುವ ಕುಷ್ಠರೋಗಿಗಳ ಹಾಗೂ ಇತರ ಅಂಗವಿಕಲರ ಸೇವೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟವರು ಬಾಬಾ ಆಮಟೆ. ಕೇವಲ ಅವರೊಬ್ಬರೇ ಈ ಸೇವೆಯಲ್ಲಿ ತೊಡಗದೆ ತಮ್ಮೊಂದಿಗೆ ತಮ್ಮ ಪತ್ನಿಯನ್ನು, ತಮ್ಮ ಮಕ್ಕಳನ್ನು, ಸೊಸೆಯಂದಿರನ್ನು, ಅಳಿಯಂದಿರನ್ನು ತೊಡಗಿಸಿಕೊಂಡರು. ಈಗ ಹುಟ್ಟಿರುವ ಅವರ ಮೊಮ್ಮಕ್ಕಳು ಸಹ ತಾತನ ಹೆಜ್ಜೆಯಲ್ಲಿಯೇ ಮುಂದುವರೆಯುವ ಸಂಕಲ್ಪ ಮಾಡಿದ್ದಾರೆ. ಸಂಸ್ಥೆಯನ್ನು ಕುಟುಂಬಾಧಾರಿತವಾಗಿ ನಡೆಸಿದ್ದರೂ, ಸಂಸ್ಥೆಯನ್ನು ಸಾರ್ವಜನಿಕವಾಗಿಯೇ ಇಟ್ಟಿದ್ದಾರೆ. ಸಮಾಜಸೇವೆಗಾಗಿ ಇಡೀ ಕುಟುಂಬವೇ ತಮ್ಮನ್ನು ಅರ್ಪಿಸಿಕೊಂಡಿರುವ ಇಂಥ ಉದಾಹರಣೆ ಅತ್ಯಂತ ವಿರಳ. ಆಮಟೆಯವರು ಮಹಾರಾಷ್ಟ್ರದ ಚಂದ್ರಪುರ ಜಿಲ್ಲೆಯಲ್ಲಿ ಸ್ಥಾಪಿಸಿರುವ 'ಆನಂದವನ', ಸಂಧಿನಿಕೇತನ ಉತ್ತರಾಯಣ, ಆನಂದನಿಕೇತನ, ಲೋಕಬಿರಾದಾರಿ ಪ್ರಕಲ್ಪ, ಹೇಮಲಾಕಾಶ, ಸೋಮನಾಥ, ಗೋಕುಲ ಮುಂತಾದ ಸಂಸ್ಥೆಗಳು ರಚನಾತ್ಮಕ ಕೆಲಸ ಮಾಡುವವರಿಗೆ ತೀರ್ಥ ಕ್ಷೇತ್ರಗಳಾಗಿವೆ. ಈ ಎಲ್ಲಾ ಸಂಸ್ಥೆಗಳಿಗೆ ಮಾತೃಸಂಸ್ಥೆಯಾದ ಆನಂದವನವನ್ನು ಪ್ರಾರಂಭಿಸಿದಾಗ ಅವರ ಬಳಿಯಿದ್ದ ಬಂಡವಾಳ ಕೇವಲ ೧೪ ರೂಗಳು. ಆಮಟೆಯವರು ಇಂದು ಅವರ ಸಂಸ್ಥೆ ತನ್ನ ಆತ್ಮ ಶಕ್ತಿಯಿಂದ ಬೆಳೆದು ಕೋಟಿ ಕೋಟಿ ರೂಗಳ ಆಸ್ತಿಯನ್ನು ಹೊಂದಿದೆ. ಲಕ್ಷಾಂತರ ಜನರು ಪ್ರಯೋಜನ ಪಡೆದಿದ್ದಾರೆ. ಆನಂದವನದ ಆಸ್ಪತ್ರೆಯ ಪ್ರವೇಶ ದ್ವಾರದಲ್ಲಿರುವ ಉಕ್ತಿ ಬಾಬಾ ಆಮ್ಟೆಯವರ ಬದುಕಿಗೆ ಕನ್ನಡಿಯಾಗಿ ನಿಂತಿದೆ. ಆ ಉಕ್ತಿ ಇಂತಿದೆ.

"ನನ್ನ ಆತ್ಮವನು ಅರಸಿದೆ, ಅದು ಸಿಕ್ಕಲಿಲ್ಲ
ನನ್ನ ದೇವರನು ಅರಸಿದೆ, ದೇವ ಕಾಣಲಿಲ್ಲ
ನನ್ನ ಸಹೋದರನನು ಅರಸಿದೆ ದೊರಕಿತು ಮೂರು"

ಈ ಉಕ್ತಿಯು ಸಾಕಾರಗೊಂಡಿರುವುದನ್ನು ಆಮಟೆಯವರ ವಿವಿಧಮುಖಿ ಸೇವಾಕಾರ್ಯಗಳಲ್ಲಿ ಕಾಣಬಹುದು.

ಪ್ರತಿ ವರ್ಷವೂ ಬರುವ ಡಿಸೆಂಬರ್ ಮಾಹೆಯಲ್ಲಿ ನಮ್ಮ ವಿದ್ಯಾರ್ಥಿಗಳು, ಯುವಕರು, ರಾಜಕಾರಣಿಗಳು ಮತ್ತು ಜನಸಾಮಾನ್ಯರು ಸಿ. ರಾಜಗೋಪಾಲಾಚಾರಿ, ಡಾ॥ ಬಾಬು ರಾಜೇಂದ್ರಪ್ರಸಾದ್, ಕುವೆಂಪು ಹಾಗೂ ಬಾಬಾ ಆಮಟೆ ಈ ನಾಲ್ಕು ಮಹಾಚೇತನಗಳ ಜೀವನ ಚರಿತ್ರೆಗಳನ್ನು ಓದಿ ಅವರು ಬೆಳಗಿಸಿದ ಮಾನವೀಯತೆಯ ದೀಪದ ಬೆಳಕಿನಲ್ಲಿ ತಮ್ಮ ಜೀವನವನ್ನು ರೂಪಿಸಿಕೊಳ್ಳಲೆಂದು ಎಲ್ಲಾ ಬೆಳಕಿಗೆ ಆಧಾರವಾದ ಆ ಸೂರ್ಯ ದೇವನನ್ನು ನಾವು ಪ್ರಾರ್ಥಿಸೋಣ.

****

ದೇಶ ವಿಭಜನೆ ಮತ್ತು ಗಾಂಧೀಜಿ

–ನೀಲತ್ತಹಳ್ಳಿ ಕಸ್ತೂರಿ

ನಮ್ಮ ದೇಶದ ವಿಭಜನೆ ಈಗ ಇತಿಹಾಸ. ಅದನ್ನು ಜಗತ್ತು ಒಪ್ಪಿಕೊಂಡಾಗಿದೆ. ಆದರೂ ನಮ್ಮಲ್ಲಿ ಕೆಲವು ಜನ ಇನ್ನೂ ಅಖಂಡ ಭಾರತದ ಕನಸು ಕಾಣುತ್ತಾರೆ. ವಿಭಜನೆ ಆದಾಗ, ಮಹರ್ಷಿ ಅರವಿಂದರು ಹೇಳಿದ್ದರು, "ಎಂದಿದ್ದರೂ ಈ ವಿಭಜನೆ ತಾತ್ಕಾಲಿಕ," ಭಾರತ ಒಂದು.

ಎಂದಾದರೊಮ್ಮೆ ಮತ್ತೆ ಒಂದಾಗುತ್ತದೆ. ಅಂಥ ಯೋಗಿವರ್ಯರ ಮಾತು ಇನ್ನೂ ಫಲಿಸಿಲ್ಲ, ಫಲಿಸುವ ಸೂಚನೆಯೂ ಇಲ್ಲ. ಫಲಿಸಲಿ ಎಂದು ಹಟ ಹಿಡಿಯುವುದೂ ತರವಲ್ಲ ಎನಿಸುತ್ತದೆ. ಒಂದನ್ನು ನಾವು ಆಶಿಸಬಹುದು. ಭಾರತ–ಪಾಕಿಸ್ತಾನಗಳ ಜನ ಮತ್ತು ಸರ್ಕಾರಗಳು ಪರಸ್ಪರ ಅಪನಂಬಿಕೆ, ದ್ವೇಷಗಳನ್ನು ಮರೆತು ಅಥವಾ ಕನಿಷ್ಠಗೊಳಿಸಿಕೊಂಡು ಮಾನಸಿಕವಾಗಿ ಒಂದಷ್ಟು ಏಕೋಭಾವವನ್ನು ರೂಪಿಸಿಕೊಂಡರೆ, ಅದೇ ದೊಡ್ಡ ಸಾಧನೆ ಆದೀತು. ಜಗತ್ತಿನ ಇತಿಹಾಸದಲ್ಲಿ ಅಂಥ ಒಂದು ಸಾಮರಸ್ಯ ಅಥವಾ ಸಹಬಾಳ್ವೆ ದೊಡ್ಡ ಘಟನೆ ಆದೀತು. ಮತ್ತು ಆಗ ಪ್ರಾಯಶಃ ಜಗತ್ತಿನ ರಾಜಕಾರಣವೇ ಬದಲಾದೀತು. ಭಾರತ–ಪಾಕಿಸ್ತಾನಗಳು ಮಾನಸಿಕವಾಗಿ ಒಂದಾಗಿ ನಿಂತು, ಜಗತ್ತಿನ ಆಗುಹೋಗುಗಳ ಬಗ್ಗೆ ದೃಢವಾದ ಏಕಾಭಿಪ್ರಾಯ ತಳೆದು ಪ್ರಯತ್ನಿಸಿದರೆ, ಬಹುಶಃ ಜಗತ್ತಿನ ಕಂಟಕ ಸಮಸ್ಯೆಗಳಾದ ಭಯೋತ್ಪಾದಕತೆ, ಬಡತನ, ರೋಗರುಜಿನ, ನೈಸರ್ಗಿಕ ವಿಕೋಪಗಳ ಪರಿಣಾಮಗಳ ತೀವ್ರತೆ, ಅಮೆರಿಕದ ಪಾಳೆಯಗಾರಿಕೆ, ಪಶ್ಚಿಮ ಜಗತ್ತಿನ ಯಜಮಾನಿಕೆ, ತೃತೀಯ ಜಗತ್ತಿನ ಮೇಲೆ ಕಪ್ಪುನೆರಳು ಚೆಲ್ಲುತ್ತಿರುವ ಆರ್ಥಿಕ ಗುಲಾಮಗಿರಿ–ಇವೆಲ್ಲದರ ಇಳಿತವನ್ನು ಕಾಣಲು ಸಾಧ್ಯವಾಗಬಹುದೇನೊ! ಜೊತೆಗೆ ಚೀನಾದಂತಹ ಮಹಾನ್ ರಾಷ್ಟ್ರವೂ ಸಹಕಾರ ಹಸ್ತ ನೀಡಿದರೆ ಪೂರ್ವಜಗತ್ತು ಪಶ್ಚಿಮ ಜಗತ್ತಿನ ಇದಿರಿಗೆ ಪ್ರಮುಖವಾಗಿ ನಿಂತು ತನ್ನ ತನವನ್ನು ಉಳಿಸಿಕೊಳ್ಳುವ ಶಕ್ತಿ ಪಡೆದೀತೊ ಏನೊ!

ಇದೂ ಹಗಲುಗನಸೇ ಎನಿಸಬಹುದು. ಆದರೂ ಆಶಿಸಬಹುದಾದುದಲ್ಲವೇ! ಸಾಮಾನ್ಯವಾಗಿ, ಅಖಂಡಭಾರತದ ಕನಸಿಗರು, ಭಾರತದ ವಿಭಜನೆಯ ಅಪರಾಧವನ್ನು ಗಾಂಧೀಜಿಯವರ ತಲೆಗೆ ಕಟ್ಟುವುದನ್ನು ನಾವು ಕಾಣುತ್ತೇವೆ. ಅವರ ನಿರಂತರ ಅಪಪ್ರಚಾರದಿಂದಾಗಿ, ಅನೇಕ ಮಂದಿ ಶ್ರೀ ಸಾಮಾನ್ಯರೂ ಬುದ್ಧಿವಂತರೂ ಸೇರಿ–ಅದೇ ಅಭಿಪ್ರಾಯಕ್ಕೆ ತಲೆದೂಗುವುದನ್ನು ನೋಡುತ್ತೇವೆ. ಇದರ ಜೊತೆಗೆ, ಸ್ವಾತಂತ್ರ್ಯನಂತರ ನಮ್ಮ ಸರ್ಕಾರಗಳು ನಡೆದುಕೊಂಡು ಬರುತ್ತಿರುವ ರೀತಿ ನೀತಿ, ಮೌಲ್ಯಗಳ ಪತನ, ಭ್ರಷ್ಟಾಚಾರ

ಇತ್ಯಾದಿಗಳೆಲ್ಲವೂ ಗಾಂಧೀಜಿ ಹೆಸರು ಹೇಳಿಕೊಂಡೇ ಅಧಿಕಾರಕ್ಕೆ ಬಂದವರಿಂದ ನಡೆಯುತ್ತ ಬರುತ್ತಿದ್ದು, ಜನ ಇದೆಲ್ಲಕ್ಕೂ ಗಾಂಧೀಜಿಯನ್ನೇ ದೂರುವ ಪ್ರವೃತ್ತಿಯೂ ಇದೆ. ವಿದ್ಯಾವಂತರೇ ಹೀಗೆ ಹೇಳುವುದನ್ನು ಕೇಳಬಹುದು. ಗುರುವಿಗೆ ಅಪಖ್ಯಾತಿ ಶಿಷ್ಯರಿಂದಲೇ ಬರುತ್ತದೆ ಅಲ್ಲವೇ? ಗಾಂಧೀಜಿ ಬಗ್ಗೆಯೂ ಹಾಗೇ ಆಗಿದೆ. ಗಾಂಧೀಜಿಯ ಅನುಯಾಯಿಗಳು ಎನಿಸಿಕೊಂಡವರು ರಾಜಕೀಯ ನಾಯಕರು ಗಾಂಧೀಜಿಯ ಹೆಸರನ್ನು ಬಳಸಿಕೊಂಡು ಅಧಿಕಾರಕ್ಕೆ ಬಂದವರು–ಇವರೇ ನಿಜಕ್ಕೂ ಗಾಂಧೀದ್ರೋಹಿಗಳು! ನಾಥರಾಮ್‌ಗೋಡ್ಸೆ ಒಂದು ಬಾರಿ ಗಾಂಧೀಜಿಯನ್ನು ಕೊಂದ, ಈ ಶಿಷ್ಯರು ಬಾರಿಬಾರಿಗೂ, ದಿನದಿನವೂ ಕೊಲ್ಲುತ್ತಿದ್ದಾರೆ ಎಂದರೆ ಉತ್ಪ್ರೇಕ್ಷೆಯೂ ಅಲ್ಲ, ತಪ್ಪೂ ಅಲ್ಲ.

ವಿಭಜನೆಯನ್ನೇ ನೋಡೋಣ, ಗಾಂಧೀಜಿ ವಿಭಜನೆಗೆ ಎಷ್ಟು ವಿರೋಧಿಗಳಾಗಿದ್ದರು, ವಿಭಜನೆ ತಡೆಯಲು ಎಷ್ಟು ಶ್ರಮಿಸಿದರು ಇದನ್ನು ತಣ್ಣಗೆ ಪರಿಶೀಲಿಸಬೇಕು, ವಿಭಜನೆಗಾಗಿ ಜಿನ್ನಾ ಹಟ ಹಿಡಿದುದರ ಪರಿಣಾಮವಾಗಿ ದೇಶ ಕೋಮುಗಲಭೆಗೆ ಸಿಕ್ಕಿತು, ಜನಹತ್ಯೆ ನಡೆಯಿತು. ಇತಿಹಾಸ ಕಾಣದಂಥ ಭಯಂಕರ ಹಿಂಸೆ, ಕೊಲೆ ನಡೆದುಹೋದವು. ಭಾರತಕ್ಕೆ ಬೆಂಕಿ ಬಿದ್ದಿತು, ಗಾಂಧೀಜಿ ಸಹಜವಾಗಿ ತೀವ್ರ ವೇದನೆಗೆ ಒಳಗಾದರು. ಅವರ ಎಲ್ಲ ಕನಸೂ, ಎಲ್ಲ ಮೌಲ್ಯ ಪ್ರಪಂಚವೂ ಮಣ್ಣು ಪಾಲಾಗುವಂತೆ ತೋರಿತು. ಮನೆಗೆ ಬೆಂಕಿ ಬಿದ್ದಾಗ, ಮೊದಲನೆಯ ಕೆಲಸ ಅದನ್ನು ಆರಿಸುವುದು, ಉಳಿದದ್ದು ಆಮೇಲೆ. ಗಾಂಧೀಜಿ ಆ ಬೆಂಕಿ ಆರಿಸುವ ಕಾರ್ಯದಲ್ಲಿ ಮುಳುಗಿದರು. ಇತ್ತ ಇತರ ನಾಯಕರು ಆ ಭುಗಿಲಿನಿಂದ ಅಧೀರರಾದರು, ಮಾತ್ರವಲ್ಲ, ನೆಹರೂ ಆಗಲಿ, ಪಟೇಲರೇ ಆಗಲಿ, ಬಹುಪಾಲು ನಾಯಕರು ಅನೇಕ ವರ್ಷ ಪರಿಶ್ರಮದಿಂದ ಸಂಘರ್ಷ ಸೆರೆವಾಸಗಳಿಂದ ಹಣ್ಣಾಗಿದ್ದರು. ಏನಾದರೂ ಒಂದು ಪರಿಹಾರವಾದರೆ ಸಾಕು ಎನ್ನುವಂತಹ ಒಂದು ರೀತಿಯ ಹತಾಶ ಸ್ಥಿತಿಗೆ ಮುಟ್ಟಿದ್ದರು. ಸ್ವಲ್ಪಮಟ್ಟಿಗೆ ಅಧಿಕಾರದ ಹಂಬಲವೂ ಇತ್ತು ಎನ್ನುವುದು ನಿಸ್ಸಂಶಯ. ಇವೆಲ್ಲ ಪರಿಸ್ಥಿತಿಯ ಲಾಭ ಪಡೆಯಲು ಯೋಜನೆ ಮಾಡಿದ್ದು ಬ್ರಿಟಿಷ್ ಪ್ರಭುತ್ವ, ವಿಶೇಷವಾಗಿ ವೈಸರಾಯ್ ಲಾರ್ಡ್‌ಮೌಂಟ್‌ಬ್ಯಾಟನ್, ಆತ ತನ್ನ ಚತುರತೆಯಿಂದ ರಾಜಕೀಯ ಕೌಶಲ್ಯದಿಂದ ಭಾರತೀಯ ನಾಯಕರು ವಿಭಜನೆಗೆ ಒಪ್ಪುವಂತೆ ಮಾಡಿದ. ಬಹುಶಃ ಆತ ವೈಸರಾಯ್ ಆಗಿ ಭಾರತಕ್ಕೆ ಬರುವಾಗಲೇ ವಿಭಜನೆಯ ಹೂಟವನ್ನು ರೂಪಿಸಿಕೊಂಡೇ ಬಂದಿದ್ದ. ಬ್ರಿಟಿಷ್ ಪ್ರಭುತ್ವದ ಮುಂದುವರಿಕೆಯಂತೂ ಅಸಾಧ್ಯ. ಅತೃಪ್ತ ಜನರನ್ನು ಎಷ್ಟು ಕಾಲ ಆಳಲುಬಹುದು? ಅಸಹಕಾರವನ್ನು ಪ್ರತಿಪಾದಿಸುವ ಪ್ರಜೆಗಳ ಸಹಕಾರ ಹೇಗೆ ಪಡೆಯಲು ಸಾಧ್ಯ? ಅಂತಹ ಸಹಕಾರ ಇಲ್ಲದಿದ್ದರೆ ಎಂಥ ಪ್ರಭುತ್ವವೂ ನಡೆಯಲಾಗದು. ಹಾಗಾಗಿ ಭಾರತ ಬಿಟ್ಟು ತೋಲಗಲೇ ಬೇಕಾಗಿತ್ತು ಬ್ರಿಟೀಷರಿಗೆ. ಆಗ ಇಲ್ಲಿ ಇದ್ದ ಒಡಕಿನ ಲಾಭ ಆದದ್ದು ಅವರಿಗಷ್ಟೆ.

ನಿರಂತರ ಅಪನಂಬಿಕೆ, ದ್ವೇಷಗಳಲ್ಲೆ ಪರಸ್ಪರ ಜಗಳವಾಡುತ್ತ ನರಳಾಡುವ ಎರಡು ಹೋಳುಗಳನ್ನು ರಚಿಸಿದರು. ಅದಕ್ಕೆ ರಾಷ್ಟ್ರನಾಯಕರ ಅನುಮೋದನೆ ಪಡೆಯುವಲ್ಲಿ ಯಶಸ್ವಿಯಾದುದು ಮೌಂಟ್‌ಬ್ಯಾಟನ್‌ನ ಕೌಶಲ.

ಈ ಕರ್ಮಕಾಂಡದಲ್ಲಿ ಗಾಂಧೀಜಿಯನ್ನು ಯಶಸ್ವಿಯಾಗಿ ಹೊರಗೆ ಇಡಲಾದುದು ನಮ್ಮ ಇತಿಹಾಸದ ಒಂದು ಅಜ್ಞಾತ ಸಂಚು. ಶಾಂತಿಸ್ಥಾಪನೆಯ ಮಾನವೀಯ ಮಹಾಕಾರ್ಯದಲ್ಲಿ ಬಾಪೂಜಿ ಮಗ್ನರಾಗಿದ್ದರೆ, ಇತರ ನಾಯಕರನ್ನು ವಿಭಜನೆಗೆ ಒಪ್ಪಿಸುವ ಭರಾಟೆ ಸಾಗಿತ್ತು.

ಇತ್ತೀಚೆಗೆ 'ಭವನ್ಸ್ ಜರ್ನಲ್' (೩೦-೯-೨೦೦೫) ಪತ್ರಿಕೆಯಲ್ಲಿ ಬಂದಿರುವ ಒಂದು ಲೇಖನ ಈ ಬಗ್ಗೆ ಬೆಳಕು ಚೆಲ್ಲುತ್ತದೆ, ಇದರ ಲೇಖಕರು ಶ್ರೀ ಜೆ.ಎಸ್.ಮಾಥುರ್ ಎಂಬುವರು. ಆತ ಅಲಹಾಬಾದ್ ವಿಶ್ವವಿದ್ಯಾನಿಲಯದ ಗಾಂಧೀ ವಿಚಾರ ಹಾಗೂ ಶಾಂತಿ ಅಧ್ಯಯನ ಕೇಂದ್ರದ ನಿರ್ದೇಶಕರು. ಹಲವಾರು ಮೂಲಾಧಾರಗಳನ್ನು ಉಲ್ಲೇಖಿಸಿ ಅವರು ಪ್ರತಿಪಾದಿಸಿದ್ದಾರೆ, ಗಾಂಧೀಜಿ ಭಾರತವನ್ನು ಸ್ವಾತಂತ್ರ್ಯದ ಹೊಸ್ತಿಲಿಗೆ ಕೊಂಡೊಯ್ದದ್ದು ದಿಟ, ಆದರೆ ವಿಭಜನೆಗೆ ಅವರು ಹೊಣೆಯಲ್ಲ! ಎಂದು ಆ ದುರಂತವನ್ನು ತಪ್ಪಿಸಲು ಅವರು ಬೇಕಾದಷ್ಟು ಹೆಣಗಿದರು. ಅದನ್ನು ತಡೆಯಲು ಒಂದು ಹೋರಾಟವನ್ನೇ ಮಾಡೋಣವೇ ಎಂದೂ ಯೋಚಿಸಿದರು. ನೆಹರೂ, ಪಟೇಲ್ ವಿಭಜನೆಗೆ ಒಪ್ಪಿದ್ದರು. ಕೃಪಲಾನಿ ಮುಂತಾದ ಇತರ ಆಪ್ತರನ್ನು ಕರೆಸಿ, ಬಾಪೂಜಿ ಈ ಚಳುವಳಿಯ ವಿಚಾರ ಚರ್ಚಿಸಿದರಂತೆ. ಆದರೂ ಅವರಗಳೂ ಜೊತೆಗೆ ನಿಲ್ಲಲಿಲ್ಲ. ಕೃಪಲಾನಿಯವರೇ ಇದನ್ನು ಲೇಖಕರಿಗೆ ಹೇಳಿದ್ದರಂತೆ. ತಮ್ಮ ತಮ್ಮಲ್ಲೇ ನಿರ್ಧಾರಮಾಡಿಯಾದ ನಂತರವೇ, ನೆಹರು, ಪಟೇಲರು ಗಾಂಧೀಜಿಗೆ ವಿಭಜನೆಯ ವಿಚಾರ ತಿಳಿಸಿದರು. "ನೌಖಾಲಿಯಲ್ಲಿ ಇದ್ದಿರಿ ಬಾಪು, ದೂರ, ಮೊದಲೇ ತಿಳಿಸಲು ಆಗದೆ ಹೋಯಿತೇನೊ" ಎಂದು ನೆಹರು ಸಬೂಬು ಹೇಳಿಬಿಟ್ಟರು. ವಿಭಜನೆಯನ್ನು ತಪ್ಪಿಸಲು, ಜಿನ್ನಾಗೇ ಪ್ರಧಾನಿ ಪಟ್ಟ ಕೊಡಿ ಎಂದೂ ಗಾಂಧೀಜಿ ವೈಸರಾಯ್‌ಗೆ ಹೇಳಿದರು. ಗಡಿನಾಡು ಗಾಂಧೀಯಂಥ ಕೆಲವರು ಇದಕ್ಕೆ ಸಮ್ಮತಿಸಿದರು. ಆದರೆ ನೆಹರು ಪಟೇಲ್ ಬಿಲ್‌ಕುಲ್ ಒಪ್ಪಲಿಲ್ಲ. ಮೌಂಟ್‌ಬ್ಯಾಟನ್ ನೆಹರೂರನ್ನು ತಮ್ಮ ಕಡೆಗೆ ಒಲಿಸಿಕೊಳ್ಳುವುದರಲ್ಲಿ ಯಶಸ್ವಿಯಾದರು. "ಬ್ರಿಟಿಷರಿಗೆ ಗಾಂಧೀಜಿಯೇ ನಿಜವಾದ ಅಪಾಯ. ಅವರ ಶಿಷ್ಯರುಗಳೇ ಆದ ನೆಹರೂ-ಪಟೇಲರನ್ನು ಬುಟ್ಟಿಗೆ ಹಾಕಿಕೊಂಡು ಗಾಂಧೀಯನ್ನು ಪಕ್ಕಕ್ಕೆ ಸರಿಸಬಹುದು" ಎಂದು ಮೌಂಟ್‌ಬ್ಯಾಟನ್ ಅವರೇ ಚರ್ಚಿಲ್‌ಗೆ ಹೇಳಿದ್ದರಂತೆ.

ವಿಭಜನೆಯೆ ಅನಿವಾರ್ಯವಾದರೆ, ಕೋಮು ಆಧಾರದ ಮೇಲೆ ಬಂಗಾಳ, ಪಂಜಾಬುಗಳನ್ನು ಕತ್ತರಿಸುವುದು ಬೇಡ. ಶರತ್‌ಚಂದ್ರಬೋಸರ ನೇತೃತ್ವದಲ್ಲಿ ಬಂಗಾಳ ಒಟ್ಟಾಗಿ ಉಳಿಯಲಿ. ವಾಯುವ್ಯ ಪ್ರಾಂತ್ಯದಲ್ಲಿ ಜನಮತಗಣನೆ ಆಗಲಿ

ಎಂದು ಗಾಂಧೀಜಿ ಸೂಚಿಸಿದ್ದಕ್ಕೂ ಮನ್ನಣೆ ಸಿಗಲಿಲ್ಲ.

ಹೋಗಲಿ, ವಿಭಜನೆಯನ್ನು ಬ್ರಿಟಿಷರು ಮಾಡುವುದು ಬೇಡ. ಅವರೇ ಒಡೆದು ಆಳುವ ನೀತಿಯ ಜನಕರು. ಅವರು ಹೋಗಲಿ, ನಾವು ನಾವು ನಮ್ಮಲ್ಲೆ ಇತ್ಯರ್ಥ ಮಾಡಿಕೊಳ್ಳೋಣ ಎಂಬ ಗಾಂಧೀ ಸೂಚನೆ ಬ್ರಿಟಿಷರಿಗೆ ಹಿಡಿಸಲಿಲ್ಲ. ಬಲವಾದ ಅಖಂಡ ಭಾರತ ಬ್ರಿಟಿಷರಿಗೆ ಬೇಕಿರಲಿಲ್ಲ. ಇದನ್ನು ಕತ್ತರಿಸಿಯೆ ಹೋಗಬೇಕು ಎಂದು ಅವರ ಮನಸ್ಸಾಗಿತ್ತು. ಆ ಉದ್ದೇಶ ಇಟ್ಟುಕೊಂಡೇ ಮೌಂಟ್‌ಬ್ಯಾಟನ್ ಬಂದದ್ದು.

ವಿಭಜನೆಯೇನೊ ಆಯಿತು, ಆದರೆ ಜನತೆ ತುಂಡಾಗಬಾರದು, ಅದಕ್ಕಾಗಿ ನೆಹರೂ ವಿರುದ್ಧವೇ ಚಳುವಳಿ ನಡೆಸಲೂ ಸಿದ್ಧ, ಭಾರತಕ್ಕೆ ಓಡಿಬಂದ ಹಿಂದೂ ಸಿಖ್ಖರನ್ನು ಮತ್ತೆ ಲಾಹೋರಿಗೆ ಕರೆದೊಯ್ಯೋಣ, ಅಲ್ಲಿಗೆ ಓಡಿಹೋಗಿದ್ದ ಭಾರತದ ಮುಸ್ಲಿಮರನ್ನು ಇಲ್ಲಿಗೆ ಕರೆತರೋಣ, ಜನರ ಮನ ಒಡೆಯುವುದು ಬೇಡ ಹೀಗೂ ಗಾಂಧೀ ಯೋಚಿಸಿದರಂತೆ, ಆದರೆ ದೈವ ಚಿತ್ತ ಬೇರೆಯಿತ್ತು. ಅವರ ಬದುಕೇ ಕೊನೆಗೊಂಡಿತು.

ನೆಹರೂ ಪಟೇಲ್ ಹೀಗೇಕೆ ಗಾಂಧೀಜಿಯಿಂದ ದೂರ ಸರಿದರು? ಆಗಲೇ ಹೇಳಿದಂತೆ ಅವರೆಲ್ಲ ಹಣ್ಣಾಗಿದ್ದರು, ಇನ್ನಷ್ಟು ಚಳುವಳಿಗೆ ಅವರು ಸಿದ್ಧರಿರಲಿಲ್ಲ, ಇದನ್ನು ನೆಹರೂ ಅವರೇ ೧೯೫೬ ರಲ್ಲಿ ಮಿಚೇಲ್ ಬ್ರಿಷರ್ ಎಂಬ ಚರಿತ್ರಾಕಾರರಿಗೆ ಹೇಳಿದರಂತೆ, ಇನ್ನೊಂದು ಕಾರಣ, ಕೈಗೆ ದಕ್ಕಲಿದ್ದ ಅಧಿಕಾರವನ್ನು ಬಿಡಲಾರದ ದೌರ್ಬಲ್ಯ, ಒಬ್ಬ ಚರಿತ್ರಾಕಾರ ಹೀಗೆ ಹೇಳಿದಾರಂತೆ. " ಅಧಿಕಾರ ರಹಿತ ನೆಹರೂ ಗಾಂಧೀಜಿಯ ಶಿಷ್ಯ; ಆದರೆ ಅಧಿಕಾರದಲ್ಲಿನ ನೆಹರೂ ಪಾಶ್ಚಿಮಾತ್ಯ ನಾಗರಿಕತೆಯ ದಳ್ಳಾಳಿ."

"ಮಹಾಪುರುಷರನ್ನು ಮಹಾತ್ಮೆಗಾಗಿ ಶಿಕ್ಷಿಸಲು ವಿಧಿಗೆ ತೋಚದಿದ್ದರೆ, ಅವರಿಗೆ ಶಿಷ್ಯರನ್ನು ಒದಗಿಸುತ್ತದೆ ವಿಧಿ" ಎಂದೊಮ್ಮೆ ಬರ್ನಾಡ್ ಷಾ ಹೇಳಿದ್ದರು.

ಗಾಂಧೀಜಿ ಹಲವಾರು ಮೂಲಭೂತ ಕ್ರಾಂತಿ ಯೋಜನೆಗಳನ್ನು ಕಲ್ಪಿಸಿದ್ದರು. ವಸಾಹತುವಾದ, ಭೋಗವಾದ, ಮಾನವನ ಹತೋಟಿಗೆ ಮೀರಿದ ತಂತ್ರಜ್ಞಾನಗಳ ವಿರುದ್ಧ ಯೋಜನೆಗಳು. ಬೆಳವಣಿಗೆ, ಪ್ರೇರಣೆಗಳಲ್ಲಿ ಹೊಸ ಸೂತ್ರಗಳು, ವಿಕೇಂದ್ರಿಕರಣ, ಸಮಾಜದಲ್ಲಿ ವ್ಯಕ್ತಿಯ ಪುನರ್‌ಸ್ಥಾಪನೆ, ಪೂರ್ಣವೂ ಲಾಭಕರವೂ ಆದ ಉದ್ಯೋಗ ರಚನೆ, ಸಮಾಜ ಪರಿವರ್ತನೆಗೆ ಅಹಿಂಸಾತ್ಮಕ ಶಾಂತಿಯುತ ಮಾರ್ಗ, ಪರಿಸರ ಸಮತೋಲನ, ಮಾಲಿನ್ಯರಹಿತ ವಾತಾವರಣ, ರಾಷ್ಟ್ರಗಳ ಸಮುದಾಯಗಳ ಸಾಂಸ್ಕೃತಿಕ ವೈಶಿಷ್ಟ್ಯಗಳ ಸಂರಕ್ಷಣೆ– ಇದೆಲ್ಲ ಅವರ ಕನಸು, ಇವೆಲ್ಲ ಎಂದೆಂದಿಗೂ ಪ್ರಸ್ತುತತಾನೇ!

ಲೂಯಿಫಿಷರ್ ಹೇಳಿದ್ದು "ಮಾನವ ಉಳಿಯಬೇಕಾದರೆ, ನಾಗರಿಕತೆ ಉಳಿಯಬೇಕಾದರೆ ಉಳಿದು ಸ್ವಾತಂತ್ರ್ಯ, ಸತ್ಯ ಸಭ್ಯತೆಗಳಿಂದ ಅರಳಬೇಕಾದರೆ,

ಭವಿಷ್ಯಕ್ಕೆ ಗಾಂಧೀಯೆ ಗತಿ." "ನಾಗರಿಕತೆ ಆತ್ಮಹತ್ಯೆಗೆ ಸಜ್ಜಾಗಿದೆ" ಎಂದರು ಆಲ್ಬರ್ಟ್‌ಸ್ವಿಟ್ಜ್ಚರ್, ಈ ಅನಾಹುತದಿಂದ ಉಳಿಸಬಹುದಾದುದು ಗಾಂಧೀ ವಿಚಾರ ಮಾತ್ರ ವಿಭಜನೆ ಕುರಿತಂತೆ ಗಾಂಧೀಜಿಯನ್ನು ದೂಷಿಸುವಮುನ್ನ ನಮ್ಮ ಜನ, ಬುದ್ಧಿವಂತ ಜನ ಕೊಂಚ ನಿಂತು ಆಲೋಚಿಸಿಯಾರೇ, ವಿಷಯ ಅರಿತಾರೆಯೇ?

* * *

ನನ್ನ ಅಭಿಲಾಷೆ

ಜನಶಕ್ತಿಗೆ ಹರಸಿರಿ ಜಯಕಾರ
ರಾಜಕೀಯ ಪಿಡುಗಿಗೆ ದೇಶವೆ ಬಲಿಯು
ಲಂಚದರಾಜರ ಗುಡುಗಿನ ಧ್ವನಿಯು
ರಾಜಕೀಯವು ಹಾಲಾಹಲವು
ರಾಜಕಾರಣಿಯ ಕೋಲಾಹಲವು
ಅಧಿಕಾರ ದಾಹದ ಬಡಬಾನಲವು

***

ಜನಮತಕೆಲ್ಲಕು ಬೆಲೆಯು ಸಿಕ್ಕಲಿ
ಜಾತಿಮತವೆಲ್ಲವು ನಾಶವಾಗಲಿ
ಪರಮತ ಸಹನೆಯು ಜೀವನವಾಗಲಿ
ಏಕಮತದಿಂದಲಿ ದೇಶವು ಬೆಳೆಯಲಿ
ಜನಪ್ರತಿನಿಧಿಗಳು ಸಜ್ಜನರಾಗಲಿ
ಸಿರಿಸಂಪದವು ದೇಶದಿ ತುಂಬಲಿ
ದುರುಳರ ಬಾಧೆಯು ನಾಶವ ಹೊಂದಲಿ
ಜೀವದೇವನು ಸಮೃದ್ಧಿಯಾಗಲಿ
ಜೀವಿಯೆ ದೇವನು ದೇವನೆ ಜೀವಿಯು
ಜೀವದೇವನ ಬಾಳುವೆ ಶಾಂತಿಯು
ಎಂಬುವ ಮಂತ್ರವೇ ಜೀವದ ಉಸಿರು
ಆಗಲಿ ವಿಶ್ವಜೀವಕೆ ಚರಮಗುರಿಯು

ಟಿ. ಕೆ. ರಾಮಚಂದ್ರ ಪ್ರಸಾದ್

ಗಾಂಧೀವಾದಿ=ಗಾಂಧೀವಿಚಾರವಾದಿ=ಸರ್ವೋದಯವಾದಿ

–ಸತ್ಯವ್ರತ

"ನಾನು ಯಾವ ನೂತನ ಸಿದ್ಧಾಂತವನ್ನೂ ಮಂಡಿಸಿಲ್ಲ. ಗಾಂಧಿ ಪಂಥ ಎಂಬುದೊಂದಿಲ್ಲ. ನನ್ನ ತರುವಾಯ ಯಾವ ಪಂಥವನ್ನೂ ಕಟ್ಟಿಹೋಗುವ ಇಚ್ಛೆ ನನಗಿಲ್ಲ. ಒಂದು ನೂತನ ತತ್ವ ಅಥವಾ ಸಿದ್ಧಾಂತದ ಮೂಲ ಪುರುಷ ನಾನು ಎಂಬ ಭಾವನೆ ನನಗಿಲ್ಲ", ಎಂದು ಗಾಂಧೀಜಿ ಸಾರಿ ಸಾರಿ ಹೇಳಿದ್ದಾರೆ. ಗಾಂಧಿವಾದವೆಂಬುದಿಲ್ಲವೆಂದ ಮೇಲೆ ಗಾಂಧೀವಾದಿಯೂ ಇಲ್ಲ. ಗಾಂಧೀ ಹೋದ ಬಳಿಕ ಸ್ಥೂಲಗಾಂಧೀ ಹೋದಂತೆ. ನಮ್ಮ ಪಾಲಿಗೆ ಉಳಿದಿರುವುದು ನಿರಾಕಾರ, ರೂಪರಹಿತ ಸೂಕ್ಷ್ಮಗಾಂಧೀ, ಅಂದರೆ ವೈಚಾರಿಕ ಗಾಂಧೀ. ಹೀಗೆ ವಿಚಾರ ಮಾಡಿದಾಗ ಗಾಂಧೀವಾದ ಎಂದರೆ ಗಾಂಧಿ ವಿಚಾರವಾದ. ಗಾಂಧೀ ವಿಚಾರ ಇದೆ. ಆದ್ದರಿಂದ ಗಾಂಧೀವಿಚಾರವಾದಿಯೂ ಇದ್ದಾನೆ.

ಗಾಂಧೀವಾದಿ, ಗಾಂಧೀ ವಿಚಾರವಾದಿ ಎಂದು ಕರೆಯಿಸಿಕೊಳ್ಳುವುದು ಆ ವಿಚಾರದ ಅನುಯಾಯಿಗಳಿಗೆ ಇಷ್ಟವಾಗದು. ಅದೊಂದು ಅರುಚಿಕರಕಾರ್ಯ. ಒಂದು ವಿಚಾರಧಾರೆಯನ್ನು ಒಬ್ಬ ವ್ಯಕ್ತಿಯ ಹೆಸರಿನಿಂದ ಕರೆಯುವುದು ಸರಿಯಲ್ಲವೆಂಬ ಯೋಚನೆ ಅವರದು. ಹಾಗೆ ಕರೆದೆವೋ, ಆ ವಿಚಾರಕ್ಕೆ ವ್ಯಕ್ತಿಯ ನಾಮಧೇಯ ಬಂತೋ, ಅದರ ಮೇಲೆ ಒಬ್ಬನ ನಾಮಾಂಕಿತ ಬಿತ್ತೋ, ಆಗ ಆ ವಿಚಾರ ವ್ಯಕ್ತಿಗೆ ಸಮವಾಯಿತು, ಸೀಮಿತವಾಯಿತು. ವ್ಯಕ್ತಿ ತಾನೆಷ್ಟು ಬೆಳೆದನೋ, ಆತನ ವಿಕಾಸವೆಷ್ಟಾಯಿತೋ, ಎಷ್ಟು ಪ್ರಯೋಗ ಮಾಡಿದನೋ, ಎಷ್ಟು ಚಿಂತನ–ಮನನಮಾಡಿದನೋ, ಎಷ್ಟು ಜ್ಞಾನಗಳಿಸಿದನೋ ಮತ್ತು ಫಲಿತಾಂಶವಾಗಿ ಎಷ್ಟು ಅನುಭವ ಪಡೆದನೋ ಅಷ್ಟು ಮಟ್ಟಿಗೆ ಆ ವಿಚಾರವೂ ಬೆಳೆಯಿತು, ಅದರ ವಿಕಾಸವಾಯಿತು. ಪ್ರಯೋಗದ ಗಟ್ಟಿ ಆಧಾರ ಮತ್ತು ಅನುಭವದ ಭದ್ರ ಬುನಾದಿ ಅದಕ್ಕೆ ದೊರೆತು ಅದೂ ಅಷ್ಟು ಮಟ್ಟಿಗೆ ಬೆಳೆಯಿತು. ಆದರೆ ಆತನ ಬೆಳವಣಿಗೆಗೆ ಎಲ್ಲಿಯೋ ಒಂದೆಡೆ ಅಂತಿಮ ಬಿಂದು ಬಂತೆನ್ನಿ. ಆ ವಿಚಾರಕ್ಕೂ ಅದೇ ಅಂತಿಮ ಬಿಂದುವಾಯಿತು, ಅದರ ಬೆಳವಣಿಗೆಗೆ ಪೂರ್ಣ ವಿರಾಮ ಬಿತ್ತು. ಅದು ವ್ಯಕ್ತಿಗೆ ಸೀಮಿತವಾದರೆ ಈ ಗತಿ, ಈ ಪೂರ್ಣವಿರಾಮ ತಪ್ಪಿದ್ದಲ್ಲ. ಆದರೆ ವ್ಯಕ್ತಿಗಿಂತ ವಿಚಾರ ಹಿರಿದು ವಿಚಾರಕ್ಕೆ ಎಂದೂ ಅಂತ್ಯವಿಲ್ಲ. ಅದು ನಿತ್ಯವೂ ಬೆಳೆಯುವಂಥದು. ಅದನ್ನು ಪರಿಮಿತಗೊಳಿಸಲಾಗದು. ಮನುಷ್ಯನ ಮನಸ್ಸು

ಹೀಗೆನ್ನಲು ತಯಾರಿದ್ದರೆ, ಅದು ತನ್ನ ಬೆಳವಣಿಗೆಗಿರುವ ಅನಂತಾವಕಾಶಗಳನ್ನು ಉಪಯೋಗಿಸಿಕೊಳ್ಳದೇ ಬಿಡುವುದಿಲ್ಲ, ಮನುಷ್ಯನ ಜಿಜ್ಞಾಸುತನಕ್ಕೆ ಅಂತ್ಯವಿಲ್ಲವೆಂದೊಪ್ಪುವುದಾದರೆ ಆಗ ಆ ವ್ಯಕ್ತಿಯ ನಂತರವೂ ಮತ್ತೊಬ್ಬ ಬಂದಾನು, ಆತ ತಾನೂ ಬೆಳೆದು ಆ ವಿಚಾರವನ್ನೂ ಮುಂದೊಯ್ದಾನು; ಹಿಂದಿನ ವ್ಯಕ್ತಿ ಅದನ್ನು ಎಲ್ಲಿಗೆ ತಂದು ನಿಲ್ಲಿಸಿದ್ದನೋ ಅಲ್ಲಿಂದ ಮುಂದಿನ ಪ್ರಯೋಗ ಮಾಡಿ ಇನ್ನೂ ಹೆಚ್ಚಿನ ಜ್ಞಾನ ಮತ್ತು ಅನುಭವಗಳಿಸಿ ಅದನ್ನು ಬೆಳೆಸುವನು ಎಂದೂ ಒಪ್ಪಬೇಕಾಗುತ್ತದೆ. ಲೋಕದಲ್ಲಿ ವಿಚಾರಗಳು ಬೆಳೆಯುವುದೇ ಹೀಗೆ, ವೈಚಾರಿಕ ಕ್ಷೇತ್ರದಲ್ಲಿ ನಡೆಯುವುದೇ ಹೀಗೆ. ಈ ನಿಟ್ಟಿನಲ್ಲಿ ಯೋಚಿಸಿದಾಗ ಗಾಂಧೀ ವಿಚಾರಕ್ಕೆ ಸರ್ವೋದಯ ವಿಚಾರ ಎನ್ನುವುದೇ ವೈಚಾರಿಕವಾಗಿ ಹೆಚ್ಚು ಶುದ್ಧ, ವೈಜ್ಞಾನಿಕವಾಗಿ ಹೆಚ್ಚು ಸಮ್ಮತ, ತಾರ್ಕಿಕವಾಗಿ ಹೆಚ್ಚು ಯುಕ್ತವೆಂದು ಗೊತ್ತಾಗುತ್ತದೆ. ಅದೇ ಹೆಚ್ಚು ವಿಶಾಲ ಮತ್ತು ಉನ್ನತಾರ್ಥವನ್ನು ಕೊಡುತ್ತದೆ ಎಂದೂ ಹೊಳೆದೀತು. ಮುಂಬರಬಹುದಾದ ಪ್ರಯೋಗ ವೀರರಿಗೂ ವಿಪುಲ ಅವಕಾಶವಿಟ್ಟಂತಾಗುತ್ತದೆ.

ಸರ್ವೋದಯ ವಿಚಾರದ ಬೆಳವಣಿಗೆಗೆ ಅತಿ ಪ್ರಾಚೀನ ಕಾಲದ ಜೈನಾಚಾರ್ಯ ಸಮಂತ ಭದ್ರನಿಂದಾರಂಭಿಸಿ ಏಸುಕ್ರಿಸ್ತ, ಸಾಕ್ರೆಟೀಸ್, ಟಾಲ್ಸ್‌ಟಾಯ್, ರಸ್ಕಿನ್,ಥೋರೋ ರಾಯ್‌ಚಂದ್‌ಭಾಯಿ, ಗೋಖಲೆ, ವಿವೇಕಾನಂದ, ವಿನೋಬಾ, ಕಸ್ತೂರಬಾವರೆಗೆ ಎಲ್ಲ ಮಹಾನ್‌ವ್ಯಕ್ತಿಗಳೂ, ಭಗವದ್ಗೀತೆ, ಬೈಬಲ್, ಅನ್‌ಟುದಿಸ್‌ಲಾಸ್ಟ್, ರಾಮಚರಿತಮಾನಸ ಇತ್ಯಾದಿ ಮಹಾನ್‌ಗ್ರಂಥಗಳೂ ಸಾಕಷ್ಟು ನೆರವು ನೀಡಿವೆ.ಇವರೆಲ್ಲರ ಜೊತೆ ಅವರ ಪಂಕ್ತಿಯಲ್ಲಿ ಗಾಂಧೀಜಿಯೂ ನಿಲ್ಲವರು. ಇವರೆಲ್ಲರಿಗಿಂತ ಗಾಂಧೀಜಿ ಅತಿ ಹೆಚ್ಚು ವಿಚಾರ, ಪ್ರಯೋಗ ಮಾಡಿದ್ದಾರೆ ಎನ್ನುವುದು ನಿಜ; ಅತಿ ಹೆಚ್ಚು ಕಾಣಿಕೆ ಸಲ್ಲಿಸಿದ್ದಾರೆ ಎನ್ನುವುದು ಸರಿ. ಇವರಿಂದಾಗಿಯೇ, ಇವರ ಕಾಲದಲ್ಲಿಯೇ ಸರ್ವೋದಯ ವಿಚಾರ ಅತ್ಯುನ್ನತ ವಿಕಾಸ ಸಾಧಿಸಿತು ಎನ್ನುವುದೂ ನಿಜ. ಈ ವ್ಯಕ್ತಿಯಲ್ಲಿ ಸೃಜನಶಕ್ತಿ, ನೂತನತೆ ಮತ್ತು ಸ್ವಂತಿಕೆ ಇದ್ದವು; ಆತ ಸ್ವತಂತ್ರ ಆಲೋಚಕನಿದ್ದ ಎನ್ನುವುದೂ ಒಪ್ಪಬೇಕಾದ್ದು. ಇಷ್ಟೆಲ್ಲ ಇದ್ದರೂ ಸರ್ವೋದಯ ವಿಚಾರ ಈ ವ್ಯಕ್ತಿಗೆ ಸಮವಲ್ಲ. ಅದಕ್ಕೆ ಆ ವ್ಯಕ್ತಿಯ ಹೆಸರು ಬರದು. ಆತನ ಹೆಸರಿನಲ್ಲಿ ವಿಚಾರದ ನಾಮಾಂಕಿತವಾಗದು. ಹೀಗೆನ್ನಲು ಮತ್ತೊಂದು ದೊಡ್ಡ ಕಾರಣವಿದೆ. ಗಾಂಧೀಜಿಗೇ ಇದು ಒಪ್ಪಿಗೆಯಾಗದು. ಆದುದರಿಂದ ಲೇಖನದ ಶೀರ್ಷಿಕೆಯಲ್ಲಿ ಕಾಣಬರುವ ಸಮೀಕರಣವೇ ಎಲ್ಲ ದೃಷ್ಟಿಯಿಂದ ಸುಸಂಗತವೆನಿಸುತ್ತದೆ. ಇದು ಗಾಂಧೀ ವಿಚಾರಾನುಕೂಲವಾಗಿಯೇ ಇದೆ. ಅದಕ್ಕೆ ಅವರ ಒಪ್ಪಿಗೆಯೂ ಇದೆಯೆಂದು ತಿಳಿಯಬೇಕು.

ಒಂದು ವಿಚಾರ ವ್ಯಕ್ತಿನಿರಪೇಕ್ಷವಾಗಿದ್ದಷ್ಟೂ ಅದರ ವಿಕಾಸಶೀಲಗುಣವನ್ನು ಯಥಾವತ್ತಾಗಿಟ್ಟುಕೊಳ್ಳುವುದನ್ನು ಮತ್ತು ಅದರ ಬೆಳವಣಿಗೆಯನ್ನು ಸುನಿಶ್ಚಿತಗೊಳಿಸಿಕೊಂಡಂತೆ ಆಗುತ್ತದೆ. ತಮ್ಮ ವಿಚಾರ ಬೆಳೆಯ ಬೇಕೆಂಬ; ಅದು ವಿಸ್ತರಿಸಬೇಕೆಂಬ ಅಪೇಕ್ಷೆ ಮತ್ತು ಅನುಯಾಯಿಗಳ ಸಂಖ್ಯೆ ಬೆಳೆಯಬೇಕೆಂಬ ಹಂಬಲ ಸ್ವಾಭಾವಿಕ. ಅದು ಮಾನವ ಸಹಜ ಅಪೇಕ್ಷೆಯೇ. ಅದಕ್ಕಾಗಿ ರಾಜಾಶ್ರಯ ಪಡೆದು, ಇಲ್ಲವೇ ಆಕರ್ಷಣೆ–ಆಸೆ–ಆಮಿಷಗಳನ್ನೊಡ್ಡಿ ಅಥವಾ ಶಸ್ತ್ರಶಕ್ತಿಯ ಬಲ ಪ್ರಯೋಗಿಸಿಯೋ ಸಂಖ್ಯಾವೃದ್ಧಿಗೆ ಪ್ರಯತ್ನಿಸುವುದು ಸರ್ವೋದಯ ವಿಚಾರಕ್ಕೆ ಒಗ್ಗದ ವಿಷಯ. ಅನ್ಯ ವಿಚಾರಗಳು ಹಾಗೆ ಬೆಳೆದಿರುವ ಉದಾಹರಣೆಗಳಿವೆ. ಅಂಥ ಬೆಳವಣಿಗೆ ಸ್ಥಿರ, ಚಿರ ಮತ್ತು ನೈಜವಾಗಿ ಆದುದು ಎನಿಸುವುದಿಲ್ಲ. ವಿಚಾರ ಬೆಳೆಯಲು ಮತ್ತು ಅನುಯಾಯಿಗಳ ಸಂಖ್ಯಾವೃದ್ಧಿಗೆ ವೇಳೆ ಹಿಡಿದೀತು ಅಥವಾ ಬೆಳಯದುದಿರಲೂಬಹುದು. ಬಿತ್ತಿದ ಬೀಜದ ಮೊಳಕೆ ಯಾವಾಗ ಒಡೆಯಬೇಕೆಂಬ ಪರಿಜ್ಞಾನ ಬಿತ್ತುವ ಕೈಗಳಿಗಿಂತ ಬೀಜಕ್ಕೇ ಚೆನ್ನಾಗಿ ಗೊತ್ತು. ಬಿತ್ತಿದ ಬೀಜ ನೆಲದಲ್ಲಿ ಶತಮಾನಗಳ ಕಾಲ ಬಿದ್ದಿರಬಲ್ಲವು. ಅನಂತರ ಅಂಕುರಿಸಬಲ್ಲವು ಮೊಳೆಯುವುವು ಎಂಬ ಶ್ರದ್ಧೆ ಮತ್ತು ತಾಳ್ಮೆ ಇರಬೇಕು. ಬಿತ್ತಿದ ವೈಚಾರಿಕ ಬೀಜ ಇಂದೋ ನಾಳೆಯೋ ಅಂಕುರಿಸಬೇಕೆಂಬ ಆತುರವೇಕೆ? ಒಂದು ವಿಚಾರ ತನ್ನ ಅಂತಃಸತ್ವವನ್ನು ಅವಲಂಬಿಸಿಯೇ ಬೆಳೆಯಬೇಕು. ಅದರಲ್ಲಿಯೇ ಆ ವಿಚಾರದ ಮತ್ತು ಅನುಯಾಯಿಗಳ ಸತ್ವ ಪರೀಕ್ಷೆಯಾಗುತ್ತದೆ. ಆ ಪ್ರಕ್ರಿಯೆಯಲ್ಲಿಯೇ ವಿಚಾರದ ಅಂತಃ ಸತ್ವ ಮತ್ತಷ್ಟು ದೃಢವಾದೀತು. ಈ ಮಾರ್ಗಬಿಟ್ಟು ಅನ್ಯ ಆತುರದ ಅಥವಾ ಶೀಘ್ರೋಪಾಯ ಅಥವಾ ಸುಲಭೋಪಾಯಗಳನ್ನು ಬಳಸತೊಡಗಿದರೆ ಫಲತಃ ಸಾಧನ ಶುದ್ಧಿಯ ನಿಯಮದ ಭಂಗವಾಗುವುದೆಂಬುದನ್ನು ಮರೆಯಲಾಗದು. ಆದ್ದರಿಂದ ಅನ್ಯಮಾರ್ಗಗಳಾವುವೂ ಸಲ್ಲದು.

ಸರ್ವೋದಯ ವಿಚಾರದ ಸಫಲತೆ ಅಥವಾ ವಿಫಲತೆಯ ಮಾನದಂಡವೂ ಭಿನ್ನ. ಸರ್ವೋದಯ ವಿಚಾರಕ್ಕೆ ರಾಜ್ಯಾಧಿಕಾರ ಹಿಡಿಯುವುದಲ್ಲ ಸರ್ವಜನರ ಹೃನ್ಮನಗಳಲ್ಲಿ ಶಾಶ್ವತ ನೆಲೆ ದೊರಕಿಸುವುದೇ ಅದಕ್ಕಿರುವ ಏಕೈಕ ಶ್ರೇಯಸ್ಕರ ಮಾರ್ಗ.

* * *

ನನಸಾದ ಸತ್ಯಕಾಮರ ಕನಸು

–ಕೆ.ಆರ್.ಮೋಹನ್

ಅಪೂರ್ವ ಸಾಹಿತಿ ಶ್ರೀ ಸತ್ಯಕಾಮರು ಕಲ್ಲಹಳ್ಳಿ ಗ್ರಾಮದ ಹತ್ತಿರ ಇರುವ ನಿರ್ಜನ ಪ್ರದೇಶದಲ್ಲಿ ಇದ್ದುಕೊಂಡು ಕೃಷಿ ಮತ್ತು ಸಾಹಿತ್ಯ ಕಾಯಕ ಮಾಡಿಕೊಂಡಿದ್ದರು. ಜಮಖಂಡಿ ತಾಲ್ಲೂಕಿನ ಕಲ್ಲಹಳ್ಳಿ ಗ್ರಾಮ ಹೆಸರಿಗೆ ತಕ್ಕಂತೆ ಕಲ್ಲು, ಗುಡ್ಡೆಬಂಡೆಗಳ ರಾಶಿಯಿಂದ ಕೂಡಿದೆ. ೧೯೭೦ ರ ದಶಕದಲ್ಲಿ ಸತತ ೫ ವರ್ಷಗಳ ಕಾಲ ಆವರಿಸಿದ ಭೀಕರ ಬರಗಾಲದಿಂದಾಗಿ ಗ್ರಾಮದ ಜನ, ಪ್ರಾಣಿ–ಪಕ್ಷಿಗಳು ತೀವ್ರ ಸಂಕಷ್ಟಕ್ಕೊಳಗಾದವು. ಇದರಿಂದ ನಿಸರ್ಗ ಪ್ರೇಮಿ ಸತ್ಯಕಾಮರು ನೋವು ಅನುಭವಿಸಿದರು. ಪಕ್ಕದಲ್ಲಿಯೇ ಇದ್ದ ಪುರಾತನ ಕಾಲದ ವಿಶಾಲವಾದ ಕೆರೆಗೆ ನೀರು ಹರಿಸುವ ಯೋಚನಾ ಲಹರಿ ಆ ಸಮಯದಲ್ಲಿ ಸತ್ಯಕಾಮರಲ್ಲಿ ಮೂಡಿಗರಿಗೆದರಿತು. ಶರಣರ ಕಾಯಕ ಕೆರೆ ಕಟ್ಟುವುದೆಂದು ಬಲ್ಲ ಅವರು ಹಳೆಯ ಕೆರೆ ಕಟ್ಟುವ ಕಾರ್ಯಕ್ಕೆ ಚಾಲನೆ ನೀಡಿದ್ದರು.

ಪ್ರತಿಯೊಂದು ಸಾರ್ವಜನಿಕ ಕಾರ್ಯಕ್ಕೆ ಹಲವು ವಿಘ್ನಗಳು ಎಂಬಂತೆ ಈ ಕೆರೆಗೂ ಕೂಡ ಕೆಲ ರೈತರ ಅಸಹಕಾರ, ರಾಜಕಾರಣಿಗಳ ವಿರೋಧ ಹಾಗೂ ಆರ್ಥಿಕ ದುರ್ಬಲತೆಯಿಂದಾಗಿ ಅವರ ಜೀವಿತಾವಧಿಯಲ್ಲಿ ಕೆರೆಗೆ ನೀರು ಹರಿಸುವ ಕಾರ್ಯ ಕೈಗೂಡಿರಲಿಲ್ಲ.

೧೯೯೮ ಅ. ೨೦ರಂದು ನಮ್ಮನ್ನಗಲಿದ ಸತ್ಯಕಾಮರು ಯೋಜಿಸಿದ ಯೋಚನಾ ಲಹರಿಗೆ ಇತಿಶ್ರೀ ಹಾಡದೆ ಅದಕ್ಕೆ ತರ್ಕ ಬದ್ಧವಾದ ಕಾಯಕಲ್ಪ ನೀಡುವಲ್ಲಿ ಸತ್ಯಕಾಮ ಪ್ರತಿಷ್ಠಾನದ ಉತ್ಸಾಹಿ ಕಾರ್ಯದರ್ಶಿ ಕುಮಾರಿ ವೀಣಾ ಬನ್ನಂಜೆ ಯಶಸ್ವಿಯಾಗಿದ್ದಾರೆ. ಈ ಸಾರ್ಥಕ ಕಾರ್ಯದ ಯಶಸ್ವಿಯಲ್ಲಿ ಹನಿ ಮತ್ತು ಹಸು ಎಂಬ ಸಂಸ್ಥೆ ಕೂಡ ಪರಿಶ್ರಮ ವಹಿಸಿದ್ದರಿಂದ ಶತಮಾನದಷ್ಟು ಹಳೆಯದಾದ ಕಲ್ಲಹಳ್ಳಿ ಕೆರೆಯ ಒಡಲಿಗೆ ಈಗ ನೀರು ಹರಿದಿದೆ.

ಕಲ್ಲಹಳ್ಳಿ ಕೆರೆಗೆ ೨೦೦೨ ರಲ್ಲಿ ನೀರು ತರುವ ಸಂಕಲ್ಪ ತೊಟ್ಟು ಸತ್ಯಕಾಮ ಪ್ರತಿಷ್ಠಾನ ಹಾಗೂ ಹನಿ ಮತ್ತು ಹಸು ಸಂಸ್ಥೆಗಳು ಆ ನಿಟ್ಟಿನಲ್ಲಿ ಸದಾ ಕಾರ್ಯ ಮಗ್ನವಾದವು. ೧೫ ಎಕರೆ ಪ್ರದೇಶ ವ್ಯಾಪ್ತಿಯುಳ್ಳ ಈ ಕೆರೆ ಒತ್ತುವರಿಯಿಂದಾಗಿ ತನ್ನ ಅಸ್ತಿತ್ವ ಕಳೆದುಕೊಂಡಿತ್ತು. ಒತ್ತುವರಿ ಜಮೀನಿನ ತೆರವಿಗೆ ನ್ಯಾಯಾಲಯದ ಮೊರೆ ಹೋಗಬೇಕಾಯಿತು. ಹಲವಾರು ಸಮಸ್ಯೆಗಳನ್ನು ಎದುರಿಸಿದ ಈ ಎರಡು ಸಂಸ್ಥೆಗಳು ಸರಕಾರದ ನೆರವಿನೊಂದಿಗೆ ಕೆರೆ ಪುನರುಜ್ಜೀವನಕ್ಕೆ ಕಾಮಗಾರಿ

ಪ್ರಾರಂಭವಾಗುವಂತೆ ಮಾಡಿದವು. ನಾವಲಗಿ ಸಮೀಪ ಜಿಎಲ್‌ಬಿಸಿ ಕಾಲುವೆ ಮೂಲಕ ೫ ಕಿ.ಮಿ. ದೂರದ ಕಲ್ಲಹಳ್ಳಿ ಕೆರೆಗೆ ನೀರು ಹರಿಸುವ ಯೋಜನೆಗೆ ೨೦೦೪ ರಲ್ಲಿ ಅಂದಾಜು ೫೦ ಲಕ್ಷ ರೂ. ವೆಚ್ಚದ ಯೋಜನೆ ರೂಪಿಸಿ ನೀರಾವರಿ ನಿಗಮದಿಂದ ೧೨ ಎಂಸಿಎಫ್‌ಟಿ ಪ್ರಮಾಣದಷ್ಟು ನೀರು ತುಂಬಿಸುವ ಪರವಾನಗಿ ಪಡೆಯಲಾಯಿತು. ಬರಗಾಲ ಕಾಮಗಾರಿಯಡಿ ೨೦ ಲಕ್ಷ ರೂ. ವೆಚ್ಚದಲ್ಲಿ ಕೆರೆ ಹೂಳೆತ್ತುವ ಕೆಲಸ ಪ್ರಾರಂಭಿಸಲಾಯಿತು. ಈಗಾಗಲೇ ೩೦ ಲಕ್ಷ ರೂ. ವೆಚ್ಚದ ಕಾಮಗಾರಿ ಕೈಗೊಳ್ಳಲಾಗಿದೆ. ಇನ್ನೂ ೨೦ ಲಕ್ಷ ರೂ. ವೆಚ್ಚದ ಕಾಮಗಾರಿ ಜವಾಬ್ದಾರಿಯನ್ನು ಗ್ರಾಮದ ಹನಿ ಮತ್ತು ಹಸು ಸಂಸ್ಥೆ ವಹಿಸಿಕೊಂಡಿದೆ. ಜಿ.ಪಂ. ಇಲಾಖೆಯಿಂದ ೧೦ ಲಕ್ಷ ರೂ. ಅಲ್ಲದೆ ಮೈಸೂರಿನ ಶ್ರೀಎಲ್.ಜಿ. ರಮೇಶ್‌ರಾವ್ ಅವರು ಈ ಯೋಜನೆಗೆ ಒಂದು ಲಕ್ಷ ರೂ. ಮತ್ತು ಶ್ರೀ ರಾಜಶೇಖರ ಕೋಟಿ ಅವರು ೧೦ ಸಾವಿರ ನೀಡಿದ್ದಾರೆ. ಇದಲ್ಲದೆ ಸತ್ಯಕಾಮರ ಅಭಿಮಾನಿಗಳು ತಮ್ಮ ಕೈಲಾದ ಧನ ಸಹಾಯ ಮಾಡಿದ್ದಾರೆ.

ಅಕ್ಟೋಬರ್ ೨೦ ರಂದು ಸತ್ಯಕಾಮರ ಏಳನೆ ಆರಾಧನೆ ಕಾರ್ಯಕ್ರಮದ ಅಂಗವಾಗಿ, ಈ ಕೆರೆಯನ್ನು ನಾಡಿಗೆ ಅರ್ಪಿಸುವ ಸಮಾರಂಭ ಗ್ರಾಮಸ್ಥರ ಮತ್ತು ಪ್ರಮುಖರ ಸಮ್ಮುಖದಲ್ಲಿ ಬಹಳ ಭಾವಪೂರ್ಣವಾಗಿ ನಡೆಯಿತು. ಕೆರೆಗೆ ನಿಸರ್ಗ ಪ್ರೇಮಿ ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿ ಅವರು 'ಶಾಂತ ಸಾಗರ' ಎಂಬ ನಾಮಕರಣ ನೀಡಿ, ಜಲ ಪೂಜೆ ಮಾಡಿ, ಸತ್ಯಕಾಮರ ಕನಸು ನನಸು ಮಾಡಿದರು.

ಇದೇ ಸಂದರ್ಭದಲ್ಲಿ ಸತ್ಯಕಾಮರ ನೆನಪಿನ ಭವನ 'ಉಪವಾಸ' ಕಟ್ಟಡಕ್ಕೆ ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಶಂಕುಸ್ಥಾಪನೆ ಮಾಡಿದರು.

ಮೂಡಬಿದರೆಯ ಖ್ಯಾತ ಉಪನ್ಯಾಸಕ ಹಾಗೂ ಸಾಹಿತಿ ಜಯಪ್ರಕಾಶ ಮಾವಿನಕುಳಿ ಮಾತನಾಡಿ ರಾಜ್ಯಕ್ಕಾಗಿ, ಹೆಣ್ಣಿಗಾಗಿ, ಹಣಕ್ಕಾಗಿ ಯುದ್ಧಗಳಾದಂತೆ ನೀರಿಗಾಗಿ ಯುದ್ಧವಾಗುವ ಕಾಲ ಬಹು ದೂರವಿಲ್ಲ ಎಂದು ಭವಿಷ್ಯ ನುಡಿದರು. ಎಂದಿನಿಂದಲೂ ಪವಿತ್ರವೆಂದು ಕರೆಯಿಸಿಕೊಳ್ಳುತ್ತಿರುವ ಗಂಗಾ, ತುಂಗಾ, ಮುಂತಾದ ನದಿಗಳು ಇಂದು ನಮ್ಮೆಲ್ಲರ ನಿರ್ಲಕ್ಷದಿಂದ ಕುಲುಷಿತಗೊಳ್ಳುತ್ತಿವೆ ಮತ್ತು ಔದ್ಯಮೀಕರಣ ಹಾಗೂ ಆಧುನಿಕ ಜಗತ್ತಿನ ನಾಗಾಲೋಟದ ಭರದಲ್ಲಿ ಬರಿದಾಗುತ್ತಿವೆ. ಶುದ್ಧ ನೀರಿಗಾಗಿ ಪೈಪೋಟಿ ನಡೆದು ಸಮೀಕ್ಷೆಯೊಂದರ ಪ್ರಕಾರ ೨೦೨೫ರ ವೇಳೆಗೆ ಯುದ್ಧವಾಗುವ ಸಂಭವವಿದೆ ಎಂದರು. ಪ್ರಜಾಪ್ರಭುತ್ವದಲ್ಲಿ ಇಂದು ಸಾಮಾಜಿಕ ಸುಖಕ್ಕಿಂತ ವೈಯಕ್ತಿಕ ಸುಖಕ್ಕೆ ಹೆಚ್ಚು ಮಹತ್ವ ನೀಡಲಾಗುತ್ತಿದ್ದು,

ಸಂಕುಚಿತ ಭಾವನೆಯ ರೋಗಕ್ಕೆ ಆಧುನಿಕ ಜಗತ್ತು ತುತ್ತಾಗುತ್ತಿದೆ. ಇದರಿಂದ ನಾವು ಸಮಷ್ಠಿ ಪ್ರಜ್ಞೆ ಕಳೆದುಕೊಳ್ಳುತ್ತಿದ್ದೇವೆಂದೂ ಅವರು ಆತಂಕ ವ್ಯಕ್ತಪಡಿಸಿದರು. ರಾಜಕಾರಣಿಗಳು, ಅಧಿಕಾರಿಗಳು ನಾಚಿಕೆ ಪಡುವಂತೆ ಗ್ರಾಮದ ಕೆರೆಗೆ ನೀರು ಹರಿಸಿದ ವೀಣಾ ಬನ್ನಂಜೆ ಅವರ ಭಗೀರಥ ಪ್ರಯತ್ನ ಎಲ್ಲರಿಗೂ ಮಾದರಿ ಎಂದರು.

ಹಂಪಿ ವಿಶ್ವವಿದ್ಯಾಲಯದ ಕುಲಪತಿ ಡಾ॥ ಬಿ.ಎ. ವಿವೇಕ ರೈ ಮಾತನಾಡಿ, ಸಪ್ತಸಾಗರವೆಂಬುದು ಸಾಹಸದ ಪ್ರತೀಕವಾಗಿದ್ದು, ಸಪ್ತಸಾಗರದಾಚೆ ಸುಪ್ತಸಾಗರವಿದೆ. ಆ ಸುಪ್ತಸಾಗರವೇ ಸತ್ಯಕಾಮರಾಗಿದ್ದರು ಅವರ ಸಂಕಲ್ಪವನ್ನು ಕೆರೆ ಜೀರ್ಣೋದ್ಧಾರದ ಮೂಲಕ ಸಾಕಾರಗೊಳಿಸಿದ ಬನ್ನಂಜೆ ಅಭಿನಂದನಾರ್ಹರು ಎಂದರು.

ಕಲ್ಲಹಳ್ಳಿ ಎಂದು ಕರೆಯಿಸಿಕೊಳ್ಳುತ್ತಿರುವ ಈ ಹಳ್ಳಿ ಇಂದು ಜಲಹಳ್ಳಿಯಾಗಿ ರೂಪುಗೊಂಡಿದೆ. ನಿಸರ್ಗದಲ್ಲಿರುವ ಈ ನೀರು ದೇವತಾ ಸ್ವರೂಪ. ಅದನ್ನು ಬರಿದಾಗದಂತೆ ಶುಚಿಯಾಗಿ, ಶುಭ್ರವಾಗಿ ಇಟ್ಟುಕೊಳ್ಳುವುದು ಈ ಭಾಗದ ಜನರ ಕರ್ತವ್ಯವೂ ಆಗಿದೆ ಎಂದು ಶ್ರೀಸಿದ್ಧೇಶ್ವರ ಸ್ವಾಮೀಜಿ ಅವರ ಆಶಯ ಔಚಿತ್ಯಪೂರ್ಣವಾಗಿತ್ತು.

* * *

ಚಿಂತೆಗಳ ಸಂತೆ

ಚುನಾವಣೆ ಬಂತೆಂದರೆ, ಟಿಕೆಟ್ಟಿನ ಚಿಂತೆ
ಟಿಕೆಟ್ಟು ಸಿಕ್ಕರೆ ಗೆಲ್ಲುವ ಚಿಂತೆ
ಗೆದ್ದರೆ ಸಚಿವನಾಗುವ ಚಿಂತೆ
ಖಾತೆದೊರಕಿದರೆ, ಬಯಸಿದ್ದು
ದೊರಕಲಿಲ್ಲವೆಂಬ ಚಿಂತೆ
ಬಯಸಿದ ಖಾತೆದೊರಕಿದರೆ,
ದುಡ್ಡುಮಾಡುವ ಚಿಂತೆ
ದುಡ್ಡುಮಾಡಿದರೆ, ಸ್ವಿಸ್ ಬ್ಯಾಂಕಿನ ಚಿಂತೆ
ಇಂಥ ಚಿಂತೆಗಳ ಸಂತೆಯಲ್ಲಿ ಸಿಲುಕಿದ
ಸಚಿವರಿಂದ ತಮಗೇನೂ
ಲಾಭವಿಲ್ಲವೆನ್ನುವುದು ಪ್ರಜೆಗಳ ಚಿಂತೆ

–ಎಂ.ಜಿ.ಶಿವರಾಂ

ಭೌದ್ಧಿಕ ಸ್ವಾತಂತ್ರ್ಯ: ಒಂದು ಚಿಂತನೆ

–ಎಸ್.ಎಲ್. ಭೈರಪ್ಪ

ಸತ್ಯ ಶಿವ ಸುಂದರಗಳಲ್ಲಿ ಸತ್ಯವೇ ಮೂಲಭೂತವಾದ ಮೌಲ್ಯ. ಸತ್ಯವನ್ನರಸುವದೇ ಮಾನವ ಜೀವನದ ಪರಮ ಗುರಿ. ಭಾರತೀಯ ಮತ್ತು ಗ್ರೀಕ್ ಪರಂಪರೆಗಳ ತತ್ವಶಾಸ್ತ್ರಗಳು ಹುಟ್ಟಿದ್ದೇ ಈ ಗುರಿಯಿಂದ. ಇಡೀ ವಿಶ್ವದ ಸೃಷ್ಟಿ ಸ್ಥಿತಿ ಲಯಗಳ ಮೂಲ ತತ್ವವಾವುದು ಎಂಬುದೇ ಆದ್ಯ ಪ್ರಶ್ನೆ. ಭಾರತೀಯರು ಈ ಪ್ರಶ್ನೆಯನ್ನು ಬಹಿರ್ಮುಖಿಯಾಗಿ ಮಾತ್ರವಲ್ಲದೆ ಅಂತರ್ಮುಖಿಯಾಗಿಯೂ ಅನ್ವೇಷಿಸಿ ಬ್ರಹ್ಮ ಆತ್ಮಗಳೆಂಬ ಎರಡು ಕಲ್ಪನೆಗಳನ್ನು ತಲುಪಿ ಅನಂತರ ಅವೆರಡೂ ಒಂದೇ ಮೂಲ ತತ್ವದ ಎರಡು ಮುಖಗಳೆಂಬ ಅರಿವನ್ನು ಮುಟ್ಟಿದರು. ಈ ತತ್ವದ ಶಾಸ್ತ್ರವೇ ತತ್ವಶಾಸ್ತ್ರವಾಯಿತು. ಅದರ ವಿವರಗಳು ಆ ಕಾಲದ ವಿಜ್ಞಾನವಾಯಿತು. ಪೃಥ್ವಿ ಆಪ್ ತೇಜ ವಾಯು ಆಕಾಶಗಳ ವಿವಿರಗಳು, ಅವುಗಳ ಪರಸ್ಪರ ಸಂಬಂಧಗಳು ಭೌತ ಮತ್ತು ಆಯುರ್ವಿಜ್ಞಾನಗಳಾದವು. ಇವೆಲ್ಲವೂ ಸತ್ಯದ ವರ್ಣನೆಯ ವಿವಿಧ ಶಾಖೆಗಳು ಮಾತ್ರ. ಪರಮ ತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವ ಪ್ರಯತ್ನದ ಪ್ರಾಥಮಿಕ ಹಂತವನ್ನು ಸಾಧಕನು ತನ್ನನ್ನು ತಾನು ಶುದ್ಧೀಕರಿಸಿಕೊಳ್ಳಬೇಕಾದ ವಿವರಗಳೇ ನೀತಿಶಾಸ್ತ್ರದ ಮೂಲ ಸೂತ್ರಗಳಾದವು. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳ ಅಷ್ಟಾಂಗ ಯೋಗದ ಮೊದಲ ಎರಡು ಮೆಟ್ಟಿಲುಗಳಾದ ಯಮ ನಿಯಮಗಳಲ್ಲಿ ವಿಧಿಸಿರುವ ಅಹಿಂಸಾ ಸತ್ಯ ಅಸ್ತೇಯ ಬ್ರಹ್ಮಚರ್ಯ ಅಪರಿಗ್ರಹ ಶೌಚ ಸಂತೋಷ ತಪಸ್ಸು ಸ್ವಾಧ್ಯಾಯ ಈಶ್ವರ ಪ್ರಣಿಧಾನಗಳು ನೀತಿಶಾಸ್ತ್ರದ ಮೂಲ ಸೂತ್ರಗಳೂ ಹೌದು. ಇವಲ್ಲದೆ ವ್ಯಕ್ತಿ ಮತ್ತು ಸಮಾಜದ ನಡವಳಿಕೆಯನ್ನುನಿರ್ದೇಶಿಸುವಧರ್ಮವು ಕಾಮ ಅರ್ಥಗಳನ್ನು ನಿಯಂತ್ರಿಸಬೇಕಾದ ತತ್ತ್ವವೇ ವಿನಾ ಪರಮ ತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವ ಸ್ಥಿತಿಯಾದ ಮೋಕ್ಷಕ್ಕೆ ಸಮವಲ್ಲ ಎಂದರೆ ನೀತಿಯು ಸತ್ಯಕ್ಕಿಂತ ಕೆಳಮಟ್ಟದ್ದೇ. ಸತ್ಯವು ಸಾಕ್ಷಾತ್ಕಾರಕ್ಕೆ ಅಗತ್ಯವಾದ ಅರ್ಹತೆ ಮಾತ್ರ.

ಸೌಂದರ್ಯವೂ ಅಷ್ಟೆ. ನಾವು ಪ್ರಕೃತಿಯ ಮಟ್ಟದಲ್ಲಿರುವಾಗ ಪ್ರಕೃತಿಯ ರೂಪಗಳಾದ ಶಬ್ದ ನಾದ ಶಿಲೆ ಮೃತ್ತಿಕೆ ಮೊದಲಾದವುಗಳಿಗೆ ರೂಪವನ್ನು ಕೊಟ್ಟು ನಿತ್ಯ ಜೀವನದ ಕ್ಲೇಶಗಳಿಂದ ಬಿಡಿಸಿಕೊಂಡು, ಅದೇ ನಿತ್ಯ ಜೀವನದಲ್ಲಿ ಆನಂದವನ್ನು ಅನುಭವಿಸುವ ವಿಧಾನ. ನಮ್ಮ ಕಲಾಮೀಮಾಂಸಕರು ಕಲಾನುಭವವನ್ನು ಬ್ರಹ್ಮಾನಂದ ಸಹೋದರ ಎಂದು ವರ್ಣಿಸಿದರೂ ಅದನ್ನು ಬ್ರಹ್ಮಾನಂದದೊಡನೆ ಸಮೀಕರಿಸಲಿಲ್ಲ. ಹಾಗೆ ನೋಡಿದರೆ ಜೀವನದ ಮೌಲ್ಯಗಳು ಬ್ರಹ್ಮಸಾಕ್ಷಾತ್ಕಾರದ ದಾರಿ ದೀಪಗಳೇ ಹೊರತು ಬ್ರಹ್ಮಸಾಕ್ಷಾತ್ಕಾರವೇ ಅಲ್ಲ. ದಾರಿ

ತೋರಿಸುವುದಷ್ಟೇ ದೀಪದ ಕೆಲಸ. ದೀಪದ ಬೆಳಕಿನ ಆಚೆಗೆ ಕ್ರಮಿಸಬೇಕಾದ ದೂರ ಎಷ್ಟೋ ಇರುತ್ತದೆ.

ಸತ್ಯವೇ ಎಲ್ಲ ಮೌಲ್ಯಗಳ ಆಧಾರ; ಎಲ್ಲ ಮೌಲ್ಯಗಳ ಗುರಿ. ಮಾನವ ಇತಿಹಾಸದ ಬೆಳವಣಿಗೆ ಎಂದರೆ ಅವನ ಸತ್ಯ ಗ್ರಹಿಕೆಯಲ್ಲಾಗುವ ವಿಕಾಸವೇ. ಸತ್ಯವನ್ನು ಆಧ್ಯಾತ್ಮಿಕ ಹಾಗೂ ಭೌದ್ಧಿಕ ಎಂದು ಎರಡು ಹಂತಗಳಾಗಿ ವಿಂಗಡಿಸುತ್ತಾರೆ. ಇವೆರಡರಲ್ಲಿ ಒಂದು ಇನ್ನೊಂದಕ್ಕೆ ವಿರೋಧಿಯಲ್ಲ. ವಿಜ್ಞಾನದ ರೂಪತಾಳುವ ಬೌದ್ಧಿಕ ಸತ್ಯವು ಮಾನವ ಇತಿಹಾಸದ ಆರಂಭಕಾಲದಿಂದ ಒಂದೇ ಸಮನೆ ವಿಕಸಿಸುತ್ತಲೇ ಇದೆ. ವಿಜ್ಞಾನದ ಬೇರೆ ಬೇರೆ ಶಾಖೆಗಳು ಬೆಳೆಯುತ್ತಲೇ ಇವೆ. ಕಳೆದ ಎರಡು ಶತಮಾನಗಳಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಭೂಗರ್ಭಶಾಸ್ತ್ರ, ಮೊದಲಾಗಿ ಅವೆಷ್ಟು ಕವಲುಗಳು ಒಡೆದು ಬೆಳೆದಿವೆ! ಇವೆಲ್ಲವೂ ಮನುಷ್ಯನು ತನ್ನ, ತನ್ನ ಪರಿಸರ ಮತ್ತು ಬಾಹ್ಯ ಜಗತ್ತಿನ ಸತ್ಯವನ್ನು ಅರಿಯುವ ಕ್ಷೇತ್ರಗಳು. ಈ ಅರಿವು ಬೆಳೆದಂತೆ ಮನುಷ್ಯನ ಮೌಲ್ಯಗಳ ಕಲ್ಪನೆಯೂ ಅರಿಯುವ ಕ್ಷೇತ್ರಗಳು. ಈ ಅರಿವು ಬೆಳೆದಂತೆ ಮನುಷ್ಯನ ಮೌಲ್ಯಗಳ ಕಲ್ಪನೆಯೂ ಬದಲಾಯಿತು; ಬದಲಾಗುತ್ತಿದೆ. ತಂತ್ರಜ್ಞಾನದ ಬೆಳವಣಿಗೆಯಿಂದ ಸಂಪತ್ತು ವಾಣಿಜ್ಯ ವ್ಯವಹಾರ ಮತ್ತು ಒಡೆತನದ ಕಲ್ಪನೆಗಳಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಿದೆ. ಮನೋವಿಜ್ಞಾನದ ಬೆಳವಣಿಗೆಯಿಂದ ಅಪರಾಧ ಮತ್ತು ಜವಾಬ್ದಾರಿಯ ಕಲ್ಪನೆಗಳಲ್ಲಿ ಊಹಿಸಲಾಗದಿದ್ದಷ್ಟು ಮಾರ್ಪಾಟಾಗಿದೆ. ವೈದ್ಯಶಾಸ್ತ್ರ ಮತ್ತು ಮನಶಾಸ್ತ್ರಗಳ ಬೆಳವಣಿಗೆಗಳಿಂದ ಲೈಂಗಿಕ ನೀತಿಯಲ್ಲಿ ಎಷ್ಟೋ ವ್ಯತ್ಯಾಸವಾಗಿದೆ. ಕೌಟುಂಬಿಕ ಸಂಬಂಧಗಳಲ್ಲಿ, ಹೆಣ್ಣು ಗಂಡುಗಳ ಸಮಾನತೆಯ ಹಕ್ಕುಗಳಲ್ಲಿ ಉಂಟಾಗಿರುವ ಬದಲಾವಣೆಗಳು ಕೇವಲ ಸಾಮಾಜಿಕ ಚಳುವಳಿಗಳಿಂದ ಆಗಿಲ್ಲ; ವೈಜ್ಞಾನಿಕ ಸಂಶೋಧನೆಯ ಫಲವಾಗಿ, ಆರ್ಥಿಕ ಒತ್ತಡಗಳ ಪರಿಣಾಮವಾಗಿ ಆಗಿವೆ. ಬುಡಕಟ್ಟು ನಾಗರಿಕತೆಯ ಸತ್ಯದ ಕಲ್ಪನೆಗೂ ಕೃಷಿ ನಾಗರಿಕತೆಯ, ಕೈಗಾರಿಕಾ ನಾಗರಿಕತೆಯ ಸತ್ಯದ ಕಲ್ಪನೆಗಳಿಗೂ ಎಷ್ಟೊಂದು ಅಂತರವಿದೆ! ಆಧುನಿಕ ಖಭೌತ ವಿಜ್ಞಾನದ ಸತ್ಯದ ಕಲ್ಪನೆಯು ನಮ್ಮ ತತ್ತ್ವಶಾಸ್ತ್ರದ ಪರಿಕಲ್ಪನೆಗಳನ್ನು ಬುಡಮೇಲು ಮಾಡಿದೆ; ಅಧ್ಯಾತ್ಮದ ದೃಷ್ಟಿಯನ್ನು ಪುನರ್ವಿಮರ್ಶೆಗೆ ಒಡ್ಡಿದೆ. ನಂಬಿಕೆಯನ್ನೇ ಆಧಾರವಾಗಿ ಇಟ್ಟುಕೊಂಡಿರುವ ಮತ ಧರ್ಮಗಳನ್ನು ಮಗುಚಿಹಾಕಿದೆ. ಇಂಥ ಮತಧರ್ಮಗಳು, ಅವುಗಳು ಸೃಷ್ಟಿಸಿರುವ ನೀತಿ ಧರ್ಮಗಳು ವಿಜ್ಞಾನದ ಬೆಳವಣಿಗೆಯನ್ನು ವಿರೋಧಿಸಿದುದರಲ್ಲಿ ಆಶ್ಚರ್ಯವಿಲ್ಲ. ಗೆಲಿಲಿಯೋನನ್ನು ಗೋಳುಹೊಯ್ದದ್ದು, ಡಾರ್ವಿನ್ನನನ್ನು ಬಹಿಷ್ಕರಿಸಿದ್ದು ವಿಜ್ಞಾನದ ಹೊಸ ಸತ್ಯವನ್ನು ಒಪ್ಪಿಕೊಂಡರೆ ತಮ್ಮ Faith ಉಳಿಯುವುದಿಲ್ಲವೆಂಬ ಅಂಜಿಕೆಯಿಂದ. ವಿಜ್ಞಾನ ಬೆಳವಣಿಗೆಯನ್ನು ವಿರೋಧಿಸದೆ ಅದರ ಹೊಸ ಬೆಳವಣಿಗೆಯು ಒಡ್ಡುವ ಸವಾಲನ್ನು ಎದುರಿಸಿ ತನ್ನ ನೆಲೆಯನ್ನು ಪುನರ್ಪರಿಶೀಲಿಸಿ, ಪುನಸ್ಥಾಪಿಸಿಕೊಳ್ಳುವ ಶಕ್ತಿಯಿಲ್ಲದ

ಮತಧರ್ಮಗಳು ಅಡ್ಡಗಲ್ಲುಗಳೇ. ನಮ್ಮ ವೈಜ್ಞಾನಿಕ ಲೆಕ್ಕಾಚಾರಕ್ಕೆ ಸಿಕ್ಕಿರುವ ಬಿಲಿಯನ್‌ಗಟ್ಟಳೆ ನಕ್ಷತ್ರಗಳ ಬಿಲಿಯನ್‌ಗಟ್ಟಳೆ ಪುಂಜಗಳ ಈ ಭೌತ ವಿಶ್ವದಲ್ಲಿ ಇದುವರೆಗೆ ಖಚಿತವಾಗಿ ತಿಳಿದಿರುವಂತೆ ಜೀವವಿರುವ ಗ್ರಹ ಈ ಭೂಮಿಯೊಂದೇ; ಅದರಲ್ಲಿ ಬದುಕುತ್ತಿರುವ ಒಂಟಿ ಬುದ್ಧಿಜೀವಿ ಈ ಮಾನವ ಎಂಬ ಅರಿವಿನಲ್ಲಿ ನಮ್ಮ ಪರಮಾರ್ಥವನ್ನು ಹೊಸದಾಗಿ ವಿಮರ್ಶಿಸಿಕೊಳ್ಳಬೇಕಾಗಿದೆ. ಈ ವಾಸ್ತವಕ್ಕೆ ಹೊಂದದ Faith ಗೆ ಯಾವ ಸ್ಥಾನವಿದೆ?

ವಿಧಾನದಲ್ಲಿ ಕಲೆಗೂ ವಿಜ್ಞಾನಕ್ಕೂ ಪರಸ್ಪರ ವಿರೋಧವೆನ್ನುವ ಮಟ್ಟಿನ ವ್ಯತ್ಯಾಸವಿದೆ. ಒಂದು ಬುದ್ಧಿಯನ್ನವಲಂಬಿಸಿ ನಿರ್ಭಾವುಕವಾಗಿ ಅಥಾವಾ ಕನಿಷ್ಠ ಭಾವದಿಂದ ಸಾಗಿದರೆ ಇನ್ನೊಂದು ಕಲ್ಪನೆಯನ್ನವಲಂಬಿಸಿ ಭಾವವನ್ನೇ ಪ್ರಧಾನವಾಗಿ ಆಶ್ರಯಿಸಿ ಅದನ್ನೇ ಪ್ರಚೋದಿಸುತ್ತದೆ. ಹಾಗೆಂದು ಕಲೆಯಲ್ಲಿ ಸತ್ಯಾಂಶವಿಲ್ಲವೆನ್ನಲಾದೀತೆ? ಕಲೆಯು ಭಾವಸತ್ಯವನ್ನು ಮಾತ್ರ ಒಳಗೊಂಡಿರುತ್ತದೆ ಎನ್ನುವುದು ಕಲೆಯ ಮಹತ್ತ್ವವನ್ನು ಕಡಿಮೆಮಾಡುವ ಮಾತಾಗುತ್ತದೆ.
ನಮ್ಮ ಅನುಭವದಲ್ಲಿ ಭಾವವು ಪ್ರಾಥಮಿಕ ಹಂತದ್ದು; ಅಡಿಪಾಯ ರೂಪದ್ದು. ಅದರ ಆಧಾರದ ಮೇಲೆಯೇ ಬುದ್ಧಿ ಬೆಳೆಯುತ್ತೆದೆ; ವಿಜ್ಞಾನದ ಸೌಧ ನಿರ್ಮಾಣವಾಗುತ್ತದೆ. ತನ್ನ ವಿಧಾನದ ಅಗತ್ಯವನ್ನನುಸರಿಸಿ ವಿಜ್ಞಾನವು ಭಾವದಿಂದ ಸಂಪೂರ್ಣ ಬಿಡುಗಡೆ ಹೊಂದಲು ಪ್ರಯತ್ನಿಸುತ್ತದೆ. ಅದರ ಅಗತ್ಯವನ್ನು ಅದು ತೀರಿಸಿಕೊಳ್ಳಲಿ. ಆದರೆ ಜೀವನವು ಭಾವವಿಲ್ಲದೆ ಸಾಗುವುದಿಲ್ಲ. ಈ ಭಾವವನ್ನು ಶೋಧಿಸುವ, ವ್ಯಕ್ತಪಡಿಸುವ, ಅದರ ಆಧಾರದಿಂದಲೇ ಬೆಳೆದು ಅದನ್ನೇ ದೂಡಿ ಕೆಡವಲು ಪ್ರಯತ್ನಿಸುವ ವಿಜ್ಞಾನದ ಬೇಡಿಕೆಗಳೊಡನೆ ಸಾಮರಸ್ಯವನ್ನು ಸ್ಥಾಪಿಸುವ ಕೆಲಸವನ್ನು ಕಲೆಯು ಮಾಡುತ್ತದೆ. ಇಂಥ ಮಹತ್ತ್ವದ ಕಾರ್ಯವನ್ನು ನಿರ್ವಹಿಸುವ ಕಲೆಯ ಸತ್ಯವನ್ನು ಕೇವಲ ಭಾವಸತ್ಯ ಎನ್ನಬಹುದೆ? ವಿಜ್ಞಾನವನ್ನು, ವೈಜ್ಞಾನಿಕ ವಿಧಾನವನ್ನು, ವಿಜ್ಞಾನದ ಫಲವಾದ ತಂತ್ರಜ್ಞಾನದ ಪ್ರಯೋಜನಗಳನ್ನು ನಮ್ಮ ಜೀವನದಲ್ಲಿ ಹೆಚ್ಚು ಹೆಚ್ಚು ಉಪಯೋಗಿಸಿಕೊಂಡಷ್ಟೂ ಕಲೆಯ ಅಗತ್ಯ ಹೆಚ್ಚುತ್ತದೆ; ಹೊಸ ಹೊಸ ಬಗೆಯ ಕಲೆಯ ಆವಿಷ್ಕಾರದ ಅನಿವಾರ್ಯತೆಯುಂಟಾಗುತ್ತದೆ; ಹೊಸ ಕಲಾ ಮಾಧ್ಯಮದ ಉದಯವಾಗುತ್ತದೆ. ಹೀಗಾಗಿ ಜೀವನವನ್ನು ವ್ಯಾಖ್ಯಾನಿಸುವ ಕೆಲಸವು ಕಲೆಯ ಹೆಗಲಮೇಲೆ ಬಿದ್ದೇ ಬೀಳುತ್ತದೆ. ಜೀವನದ ಇತರ ಮೌಲ್ಯಗಳನ್ನು ತಡಕದೆ, ಅವುಗಳನ್ನು ಪುನರ್ವ್ಯಾಖ್ಯಾನಿಸದೆ ಜೀವನವನ್ನು ವ್ಯಾಖ್ಯಾನಿಸುವುದು ಹೇಗೆ? ಕಲೆಯು ವಿಜ್ಞಾನಕ್ಕಿಂತ ಭಿನ್ನವಾದ ಆದರೆ ಮಹತ್ವದಲ್ಲಿ ಕಡಿಮೆಯಲ್ಲದ ಒಂದು ಸತ್ಯವನ್ನು ಅರಸುತ್ತದೆ. ಇತರ ಕಲಾ ಪ್ರಕಾರಗಳಿಗಿಂತ ಸಾಹಿತ್ಯವು ಈ ಕಾರ್ಯವನ್ನು ಹೆಚ್ಚು ಸ್ಫುಟವಾಗಿ, ಹೆಚ್ಚು ವ್ಯಾಪಕವಾಗಿ ಮಾಡುತ್ತದೆ. ವ್ಯವಹಾರ ಮತ್ತು ವಿಜ್ಞಾನಗಳು ತಮ್ಮ ಬೆಳವಣಿಗೆಗಾಗಿ ನಿರ್ಮಿಸಿಕೊಂಡ ಭಾಷೆ ಮತ್ತು ಪರಿಕಲ್ಪನೆಗಳನ್ನು

ಸಾಹಿತ್ಯವು ಹೆಚ್ಚು ಕೌಶಲದಿಂದ ಬಳಸಿಕೊಳ್ಳುತ್ತದೆ. ಈ ಅನುಕೂಲವು ಸಂಗೀತ ನರ್ತನ ಶಿಲ್ಪ ವಾಸ್ತು ಮೊದಲಾದ ಇತರ ಕಲಾಪ್ರಕಾರಗಳಲ್ಲಿ ಅಷ್ಟಾಗಿ ಇಲ್ಲ. ಈ ಕಾರಣದಿಂದಲೇ ಸಾಹಿತ್ಯವು ಇತರೆ ಕಲಾಪ್ರಕಾರಗಳಿಗಿಂತ ಹೆಚ್ಚಾಗಿ ವ್ಯಾಖ್ಯಾನದ ವಸ್ತುವಾಗಿದೆ. ಸಾಹಿತ್ಯವನ್ನು ವ್ಯಾಖ್ಯಾನಿಸುವವರು ಸಾಹಿತ್ಯ ವಿಮರ್ಶಕರು ಮಾತ್ರವಲ್ಲ: ಸಮಾಜ ಶಾಸ್ತ್ರಜ್ಞರು, ಸಮಾಜ ಸುಧಾರಕರು, ಚಳುವಳಿಗಾರರು, ನೀತಿ ಸುಧಾರಕರು, ರಾಜಕಾರಣಿಗಳು. ರಾಮನನ್ನು ಒಡೆದುಹಾಕದೆ, ಸೀತೆಯ ಪಾತ್ರವನ್ನು ಬದಲಾಯಿಸದೆ ನಮ್ಮಲ್ಲಿ ಸಮಾಜ ಪರಿವರ್ತನೆ ಸಾಧ್ಯವೇ ಇಲ್ಲವೆಂದು ಆಧುನಿಕ ಕಾಲದಲ್ಲಿ ಎಷ್ಟೊಂದು ಚಳುವಳಿಗಳು ಕಾರ್ಯನಿರತವಾಗಿವೆ! ಡಿ.ಎಂ.ಕೆ.ಯಿಂದ ಹಿಡಿದು ಸ್ತ್ರೀವಾದಿಗಳವರೆಗೆ, ಮಾರ್ಕ್ಸಿಸ್ಟರಿಂದ ಹಿಡಿದು ದಲಿತ ಬಂಡಾಯದವರೆಗೆ. ರಾಮಸೀತೆಯರು ಮಾತ್ರವಲ್ಲ, ಅಹಲ್ಯೆ, ದ್ರೌಪದಿ, ಕುಂತಿ, ಸಾಹಿತ್ಯದ ಪಾತ್ರಗಳಿಗೆ ಮಾತ್ರ ಇಷ್ಟೊಂದು ರಭಸದ ಲಗ್ಗೆಯನ್ನು ಆಹ್ವಾನಿಸುವ ಗುಣವಿದೆ. ಈ ಪಾತ್ರಗಳು ಕೇವಲ ಸಾಹಿತ್ಯದ ಪಾತ್ರಗಳಾಗಿ ಉಳಿಯದೆ ಪುರಾಣ ಮತ್ತು ಧರ್ಮದ ಮಾದರಿಯ ಪಾತ್ರಗಳಾಗಿ ಬೆಳೆದಿರುವುದು ಈ ಲಗ್ಗೆಯ ಕಾರಣವೆಂಬುದು ನಿಜ. ಆದರೆ ಇಂಥ ಪುರಾಣಪ್ರಮಾಣಕ್ಕೆ ಬೆಳೆಯುವುದೇ ಅಂತಶ್ಶಕ್ತಿಯುಳ್ಳ ಪ್ರತಿಯೊಂದು ಸಾಹಿತ್ಯ ಕೃತಿಯ ಮತ್ತು ಅದರ ಪಾತ್ರಗಳ ಗುಣವೆಂಬುದನ್ನು ನಾವು ಮರೆಯಬಾರದು. ಸಂಗೀತ, ನರ್ತನ, ಶಿಲ್ಪ ಮೊದಲಾದವುಗಳನ್ನು ನಮ್ಮ ಚಳುವಳಿಕಾರರು ಘಾತಿಸಲು ಹೋಗದಿರುವ ಕಾರಣಗಳೇನು?

ಯಾವ ರೀತಿಯ ಸಾಹಿತ್ಯ ಪ್ರಕಾರವೇ ಆಗಲಿ ಅದು ವ್ಯಕ್ತಪಡಿಸುವ ಅನುಭವದ ಸತ್ಯದಿಂದಲೇ ಅದರ ಉತ್ಕೃಷ್ಟತೆಯು ನಿರ್ಧಾರಿತವಾಗುತ್ತದೆ. ಒಂದು ಕವಿತೆಯ ಉಕ್ತಿಚಾತುರ್ಯ, ಪದಲಾಲಿತ್ಯ, ಲಯ ಮೊದಲಾದುವೆಲ್ಲ ಅದರ ಅರ್ಥಗಹನತೆಯ, ಅರ್ಥದ ಮಿಂಚಿನ ವಾಹಕವಾದಾಗ ಮಾತ್ರ ಅವಕ್ಕೆ ಮೌಲ್ಯವುಂಟು. ಜೀವನದ ಅನುಭವ, ತುಡಿತ, ಕನಸು ಜಿಜ್ಞಾಸೆಗಳೆಲ್ಲ ಸಾಹಿತ್ಯದ ಅರ್ಥದಲ್ಲಿ ಸೇರಿರುತ್ತವೆ. ಈ ಅರ್ಥಸಂವಹನೆಗಾಗಿಯೇ ಸಾಹಿತ್ಯದಲ್ಲಿ ಹೊಸ ಹೊಸ ಶೈಲಿ ಮತ್ತು ತಂತ್ರಗಳನ್ನು ಸಾಹಿತಿಗಳು ಆವಿಷ್ಕರಿಸಿಕೊಳ್ಳುತ್ತಾರೆ. ವಾಸ್ತವವಾದಿ ಸಾಹಿತ್ಯವಾಗಬಹುದು, ಮಾಂತ್ರಿಕ ವಾಸ್ತವತೆಯ ರೀತಿಯಾಗಬಹುದು, ಬೇರೆಯಾವುದೇ ತಂತ್ರವಾಗಬಹುದು, ಆದರೆ ಉದ್ದೇಶವು ತಾನು ವ್ಯಕ್ತಪಡಿಸುವ ಸತ್ಯವನ್ನು ಹೆಚ್ಚು ಪರಿಣಾಮಕಾರಿಯಾಗಿ ಸಂವಹಿಸುವುದೇ ಆಗಿರುತ್ತದೆ.

ಈ ವರ್ಷದ ಆಳ್ವಾಸ್ ನುಡಿಸಿರಿ ಸಮ್ಮೇಳನದ ಪ್ರಧಾನ ಆಶಯ 'ಬೌದ್ಧಿಕ ಸ್ವಾತಂತ್ರ್ಯ'. ವಾಸ್ತವವಾಗಿ ಬೌದ್ಧಿಕ ಸ್ವಾತಂತ್ರ್ಯವೇ ನಾಡಿನ ಗೌರವ ಪ್ರತಿಷ್ಠೆಗಳ ಪ್ರತೀಕವಾಗಿರುತ್ತದೆ ಎಂಬುದಕ್ಕೆ ಜಗತ್ತಿನ ಬೌದ್ಧಿಕ ವಿಕಾಸದ ಇತಿಹಾಸವೇ ಅದರ ಸಾಕ್ಷಿಗಳನ್ನು ಒದಗಿಸುತ್ತದೆ. ನಾನು ಈಗಾಗಲೇ ಸೂಚಿಸಿರುವಂತೆ, ನಮ್ಮ ದಾರ್ಶನಿಕ, ಸಾಹಿತಿಕ, ಕಲಾತ್ಮಕ ಪರಂಪರೆಗಳನ್ನೇ ಆಳವಾಗಿ ಒಳಹೊಕ್ಕು ನೋಡಿದರೆ, ಅವುಗಳಲ್ಲಿ ಈ ಬೌದ್ಧಿಕ ಅಥವಾ ವೈಚಾರಿಕ ಸ್ವಾತಂತ್ರ್ಯ ಮತ್ತು ಸಹನಶೀಲತೆಗಳನ್ನು

ಕಾಣುತ್ತೇವೆ. ಇಲ್ಲವಾದಲ್ಲಿ, ಆಸ್ತಿಕವಾದಕ್ಕೆ ವಿರುದ್ಧವಾಗಿ ನಾಸ್ತಿಕವಾದ, ಚಾರ್ವಾಕ ಸಿದ್ಧಾಂತಗಳಂಥ ಬೆಳವಣಿಗೆಗಳಿಗೆ ಎಡೆ ದೊರೆಯುತ್ತಿತ್ತೆ? ಯಾವುದೇ ವಿಚಾರದ ಮಂಡನೆಯಾಗಲೀ ಖಂಡನೆಯಾಗಲೀ, ನಮ್ಮದೇಶದ ಪ್ರಾಚೀನ ಸಂಸ್ಕೃತಿಯಲ್ಲಿ ತಾತ್ತ್ವಿಕ ಅಥವಾ ವೈಚಾರಿಕ ನೆಲೆಯಲ್ಲಿ ನಡೆಯುತ್ತಿದ್ದಿತೇ ಹೊರತು, ವೈಯುಕ್ತಿಕ ದ್ವೇಷಾಸೂಯೆಗಳ ನೆಲೆಯಲ್ಲಲ್ಲ. ಈ ವಿವೇಚನೆಯನ್ನು ಮರೆಯುತ್ತಿರುವುದು ನಮ್ಮ ರಾಷ್ಟ್ರೀಯ ದುರಂತವಾಗಿದೆ. ಈ ಅಂಶವನ್ನು ತಮ್ಮ ಗಮನಕ್ಕೆ ತರುವುದೇ ನನ್ನ ಈ ದೀರ್ಘಪೀಠಿಕೆಯ ಉದ್ದೇಶ.

ನಮ್ಮ ನಾಡಿನ ಸಂವಿಧಾನ ನಮಗೆ ಭರವಸೆ ನೀಡಿರುವ ಹಲವು ಬಗೆಯ ಸ್ವಾತಂತ್ರ್ಯಗಳ–ಉದಾಹರಣೆಗೆ ವಾಕ್ ಸ್ವಾತಂತ್ರ್ಯ ಅಥವಾ ಅಭಿವ್ಯಕ್ತಿ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ವೃತ್ತಿ ಸ್ವಾತಂತ್ರ್ಯ, ಸಂಚಾರ ಸ್ವಾತಂತ್ರ್ಯ, ನೆಲಸಿಕೆ ಸ್ವಾತಂತ್ರ್ಯ, ಮತದಾನದ ಸ್ವಾತಂತ್ರ್ಯ, ಇವೇ ಮೊದಲಾದುವುಗಳ– ಹಿನ್ನೆಲೆಯಲ್ಲಿಯೂ ಈ ಬೌದ್ಧಿಕ ಅಥವಾ ವೈಚಾರಿಕ ಸ್ವಾತಂತ್ರ್ಯದ ಆಶಯವೇ ಅಡಗಿದೆ.

ಆದರೆ ಇಂದು ಆಗುತ್ತಿರುವುದಾದರೂ ಏನು? ವಿಚಾರವಾದದ ಹೆಸರಿನಲ್ಲಿ, ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ನಡೆಯುತ್ತಿರುವ ಕೆಲವು ಪ್ರಯತ್ನಗಳು ಆ ಸ್ವಾತಂತ್ರ್ಯದ ಅಪಹರಣದ ಪ್ರಯತ್ನಗಳೇ ಆಗುತ್ತಿವೆ. ಇಂಥ ಅನೇಕ ಪ್ರತಿಭಟನೆಗಳು, ಚಳವಳಿಗಳು ಸೋಗಿನವಾಗಿ ಪರಿಣಮಿಸುತ್ತಿವೆ ಎಂಬುದೇ ಚಿಂತಾಜನಕವಾಗಿರುವ ಸಂಗತಿ. ಅನೇಕ ಸ್ವಯಂಘೋಷಿತ ಬುದ್ಧಿಜೀವಿಗಳು ಕೇವಲ ಬದ್ಧಜೀವಿಗಳಾಗಿಬಿಟ್ಟಿದ್ದಾರೆ. ಹೀಗಾಗಿ ಸತ್ಯದ ಹಲವು ಮುಖಗಳು ಅವರಿಗೆ ಕಾಣಿಸುವುದೇ ಇಲ್ಲ; ಅಥವಾ ಅವರು ಉದ್ದೇಶಪೂರ್ವಕವಾಗಿಯೇ ಉಳಿದ ಸಂಗತಿಗಳನ್ನು ಮರೆಮಾಚುತ್ತಾರೆ. ಸತ್ಯವನ್ನು ಮರೆಮಾಚುವುದಾಗಲೀ, ತಿರುಚುವುದಾಗಲೀ, ವಿಕೃತಗೊಳಿಸುವುದಾಗಲೀ ಅಪಾಯಕಾರಿ. ಕಿಡಿಗೇಡಿತನವೇ ಕೆಲವು ವ್ಯಕ್ತಿಗಳ, ಸಂಸ್ಥೆಗಳ, ಪತ್ರಿಕೆಗಳ ಉದ್ದೇಶವಾಗಿರುವಂತೆಯೂ ತೋರುತ್ತದೆ. ಅಂತೆಯೇ, ಅಧಿಕಾರಶಾಹಿಯ ಅಂಗವಾಗಿರುವ ಕೆಲವು ಅಧಿಕಾರಿಗಳೂ ಬೌದ್ಧಿಕ ಗುಲಾಮಿ ಅಥವಾ ದಿವಾಳಿಯನ್ನು ಮರೆಯುವುದನ್ನೇ ತಮ್ಮ ಕಾಯಕವನ್ನಾಗಿಸಿಕೊಂಡಿರುವ ದುರಂತವನ್ನೂ ನಾವು ಕಾಣುತ್ತಿದ್ದೇವೆ. ಕೆಲವೊಮ್ಮೆ ಕಾಲ್ಪನಿಕ ಭಯದಿಂದಲೂ ನರಳುವ ಇಂಥ ಅಧಿಕಾರಿಗಳು ವಹಿಸುವ ಅತಿಯಾದ ಎಚ್ಚರವು ಹಾಸ್ಯಾಸ್ಪದವಾಗಿರುವುದು ಮಾತ್ರವಲ್ಲದೆ ಬೌದ್ಧಿಕ ಸ್ವಾತಂತ್ರ್ಯಕ್ಕೆ ಮಾರಕವೂ ಆಗುತ್ತಿದೆ. ....ಮುಂದುವರಿಯುವುದು.

[ಈ ಲೇಖನಕ್ಕೆ ಸಂಬಂಧಿಸಿದಂತೆ ಬರುವ ಪ್ರತಿಕ್ರಿಯಾತ್ಮಕ ವಿಚಾರಗಳಿಗೆ ಸ್ವಾಗತವುಂಟು –ಸಂ]

* * *

ವಿಚಾರ ದೀಪ್ತಿ....... *(೨ನೇ ಪುಟದಿಂದ ಮುಂದುವರೆದಿದೆ .....)*

ಕೆಸರು ಹೊರ ಹಾಕಿಸಿ ಎಂದು ಅಧಿಕಾರಿಗಳಿಗೆ ಅಪ್ಪಣೆ ಕೊಡಿಸಿದರು. ಆಗ ಅಲ್ಲಿನ ಜನ ಹೇಳಿದರು. 'ನೀರನ್ನು ನಾವೇ ಆಚೆ ಹಾಕಿಕೊಳ್ಳುತ್ತೇವೆ. ನಮಗೆ ಗುಡಿಸಲು–ಬಯಲು ಎರಡೂ ಒಂದೇ. ಮೊದಲು ಅನ್ನ–ಬಟ್ಟೆಗೆ ವ್ಯವಸ್ಥೆ ಮಾಡಿ'. ರಾಜಕಾರಣಿಗಳಿಗೆ ಕಾಮನ್‌ಸೆನ್ಸ್ ಅಲ್ಲೂ ಕೈ ಕೊಟ್ಟಿತ್ತು.

ಇನ್ನೂ ಕೆಲವು 'ಪುಣ್ಯಾತ್ಮ' ರಾಜಕಾರಣಿಗಳು ಇದ್ದಾರೆ. ಅವರಿಗೆ ಸಮೃದ್ಧಿ ಮತ್ತು ನೆರೆ ಹಾವಳಿ–ಈ ಎರಡರ ನಡುವಿನ ವ್ಯತ್ಯಾಸವೇ ಗೊತ್ತಿಲ್ಲ. ಕೆರೆ ಕಟ್ಟೆಗಳು, ಜಲಾಶಯಗಳು ತುಂಬಿದಾಗ ಗಂಗೆ ಪೂಜೆ ಮಾಡುವುದು ವಾಡಿಕೆ. ಆಡಳಿತದ ಚುಕ್ಕಾಣಿ ಹಿಡಿದವರು ಪತ್ನಿ ಸಮೇತರಾಗಿ ಪೂಜೆ–ಬಾಗಿನ ಸಲ್ಲಿಸಿದರೆ ನಾಡಿಗೆ ಒಳ್ಳೆಯದಾಗುತ್ತದೆ. ಬೆಳೆ ಚೆನ್ನಾಗಿ ಆಗುತ್ತದೆ. ಜನರ ಬದುಕು ಸಮೃದ್ಧಿ ಆಗುತ್ತದೆ ಎಂಬುದು ಅದರ ಹಿಂದಿರುವ ನಂಬಿಕೆ.

ಮೊನ್ನೆಯ ಮಳೆಗೆ ಬೆಂಗಳೂರಿನ ಕೆರೆಗಳು ತುಂಬಿ, ಕೋಡಿ ಬಿದ್ದು ಜನರ ಬದುಕನ್ನು ಗುಡಿಸಿ ಗುಂಡಾಂತರ ಮಾಡಿತು. ತಗ್ಗು ಪ್ರದೇಶದಲ್ಲಿದ್ದ ಮನೆಗಳಿಗೆ ನೀರು ನುಗ್ಗಿತು. ಬಹುತೇಕ ಕೆರೆಗಳಿಗೆ ಒಳಚರಂಡಿ ಸಂಪರ್ಕ ಇರುವುದರಿಂದ ಗಲೀಜು ನೀರು ನುಗ್ಗಿದ ಮನೆಗಳಲ್ಲಿ ಇರುವವರ ಬದುಕು ಅಸಹನೀಯವಾಯಿತು. ಕೆಸರು ಮತ್ತು ದುರ್ವಾಸನೆ ನಡುವೆ ಅವರ ಸ್ಥಿತಿ 'ಈ ಬದುಕಮನ್ನಿಸೋ ಪ್ರಭುವೇ' ಎಂಬಂತಾಯಿತು.

ಆದರೆ ಈ ರಾಜಕಾರಣಿಗಳು ಮಾಡಿದ್ದೇನು ಗೊತ್ತೇ? ಪ್ರವಾಹ ಹರಿಸಿದ ಕೆರೆಗಳಿಗೆ ಪತ್ನಿ ಸಮೇತರಾಗಿ ಬಾಗಿನ ಪೂಜೆ ಸಲ್ಲಿಸದರು. ಫೋಟೋ ತೆಗೆಸಿಕೊಂಡರು. ಬೆಂಗಳೂರಿನ ಕೆರೆಗಳು ಅದ್ಯಾವ ಬೆಳೆ ಬೆಳೆದು, ಕೃಷಿಕರ ಬದುಕು ಹಸನಾಗಿಸುತ್ತದೋ ಆ ವರುಣ ದೇವನೇ ಬಲ್ಲ. ಹೋಗಿ–ಹೋಗಿ ನೆರೆ ಹಾವಳಿ ಉಂಟು ಮಾಡಿದ ಈ ಕೆರೆಗಳಿಗೆ ಪೂಜೆ ಮಾಡಿದರಲ್ಲಾ... ಆ ಮೂಲಕ ನೆರೆಯಿಂದ ಜನರಿಗೆ ಆದ ಸಂಕಷ್ಟಕ್ಕೆ ಸಂತೃಪ್ತ ಭಾವದ ಮನ್ನಣೆ ನೀಡಿದರಲ್ಲಾ... ಇದಕ್ಕೆ ಏನನ್ನಬೇಕು? ಪ್ರತಿ ವರ್ಷ ಇದೇ ರೀತಿ ನೆರೆ ಬಂದು ಜನರ ಬದುಕು ಯಕ್ಕುಟ್ಟಿ ಹೋಗಲಿ ಎಂಬುದು ಇದರ ಅರ್ಥವೇ? ಪೂಜೆ ಸಲ್ಲಿಸಿದವರಿಗೆ ಅಷ್ಟು ಕಾಮನ್‌ಸೆನ್ಸ್ ಬೇಡವೇ? ಇನ್ನು ಅಧಿಕಾರದ ಅವಧಿ ಮುಗಿಯುತ್ತಾ ಬಂದಿರುವ ಬೆಂಗಳೂರು ಮೇಯರ್ ತಮ್ಮದೊಂದು ಮೇಣದ ಪ್ರತಿಮೆಯನ್ನು ಪಾಲಿಕೆ ಕಚೇರಿಯಲ್ಲಿ ಅನಾವರಣ ಮಾಡಿದ್ದಾರೆ. ಮಳೆಯಿಂದ ಇಡೀ ಮಹಾನಗರ ದಕ್ಷಿಣ ಕನ್ನಡದ ಕಂಬಳದಂತೆ ಕೆಸರು ಗದ್ದೆ ಆಗಿರುವಾಗ ಮೇಯರ್‌ಗೆ ಪ್ರತಿಮೆ ಪ್ರತಿಷ್ಠಾಪನೆಯ ಸಿರಿ, ಇವರಿಗೆಲ್ಲ ಏನಾಗಿದೆ? ಉತ್ತರ ಬಹಳ ಸಿಂಪಲ್, ಕಾಮನ್‌ಸೆನ್ಸ್‌ನ ಆಬ್ಸೆನ್ಸ್!

–ಡಿ.ತ್ಯಾಗರಾಜ್

ಸನ್ಮಾನ್ಯರಿಂದ

'ಜನಪದ ವಿಚಾರ' ಬರುತ್ತಿದೆ. ಲೇಖನಗಳು ಚೆನ್ನಾಗಿವೆ ತಮ್ಮೆಲ್ಲಾ ಲೇಖನಗಳಲ್ಲೂ ಗಾಂಧೀವಿಚಾರ ಇರುತ್ತದಾದರೂ ಗಾಂಧೀಯವರೆ ಬರೆದಿರುವ ಲೇಖನಗಳ ಯಥಾ ಪ್ರತಿಯನ್ನು ಒಂದು ಪುಟದಲ್ಲಿ ಪ್ರಕಟಿಸಿದರೆ ಚೆನ್ನ.

–ಎಂ.ಬಸವಯ್ಯ, ತುಮಕೂರು

***

ನವೆಂಬರ್ ಮಾಹೆ ಜನಪದ ವಿಚಾರದಲ್ಲಿ 'ಮಕ್ಕಳ ಮುಷ್ಟಿಯಲ್ಲಿದೆ ಮನುಕುಲದ ಭವಿಷ್ಯ' ಎಂಬುದನ್ನು ಓದಿ ಸಂತೋಷವಾಯಿತು. ಎರಡು ಗಂಡು ಮಕ್ಕಳ ತಾಯಿಯಾಗಿರುವ ನನ್ನ ಸೊಸೆ ಕೂಡ ಅದನ್ನು ಓದುವಂತೆ ಮಾಡಿದೆ.

–ಕೆ.ಎಸ್. ಕೃಷ್ಣಪ್ಪ, ಕೋಲಾರ

***

'ಜನಪದ ವಿಚಾರ' ಬರುತ್ತಿದೆ. ತಪ್ಪದೆ ಓದುತ್ತಿದ್ದೇನೆ. ನವೆಂಬರ್ ಸಂಚಿಕೆ ಶಿಕ್ಷಣ ವಿಚಾರಗಳಿಗೆ ಹೆಚ್ಚು ಒತ್ತು ಕೊಟ್ಟದ್ದು ಸಂತೋಷವಾಯಿತು. 'ಮುಷ್ಠಿ' ಶಬ್ದ ಅಲ್ಲ 'ಮುಷ್ಟಿ' ಸಂಸ್ಕೃತದ್ದು. ಮುಖಪುಟದಲ್ಲಿಯೆ ಈ ತಪ್ಪು ಇರುವುದರಿಂದ ನಿಮ್ಮ ಗಮನಕ್ಕೆ ತಂದೆ.

–ಶ್ರೀನಿವಾಸ ಹಾವನೂರು, ಮಂಗಳೂರು

[ಕಾಗುಣಿತದಲ್ಲಿಯ ಈ ತಪ್ಪಿಗಾಗಿ ವಿಷಾದಿಸುತ್ತೇವೆ. –ಸಂ]

***

'ಜನಪದ ವಿಚಾರ' ಹೆಸರಿಗೆ ತಕ್ಕಂತೆ ವೈಚಾರಿಕ ಲೇಖನಗಳನ್ನು ಅಳವಡಿಸಿಕೊಂಡು ಸತ್ವಪೂರ್ಣವಾಗಿ ಬರುತ್ತಿದೆ.

–ಎಲ್. ನರಸಿಂಹಯ್ಯ, ತುಮಕೂರು

***

ನಿಮ್ಮ ಮತ್ತು ಬೇರೆಯವರ ಉಪಯುಕ್ತವಾದ ಲೇಖನಗಳು ನನ್ನ ಮನಸೆಳೆದಿದೆ. "ಡೈಜೆಸ್ಟ್" ಎಂಬುದರ ತಾಣದಲ್ಲಿ "ಜನಪದ ವಿಚಾರ ಪಾಕ" ಎಂದು ಬರೆದರೆ ನಿಮ್ಮ ಭಾವಕ್ಕೇನೂ ಕೊರೆಯಿಲ್ಲವೆಂದು ಭಾವಿಸುತ್ತೇನೆ.

–ಅರೈಯರ್ ಮೇಲುಕೋಟೆ

***

ಸಾದರ ಸ್ವೀಕಾರ

ಸ್ವಾತಂತ್ರ್ಯ ಚಳುವಳಿಯಲ್ಲಿ ಕರ್ನಾಟಕದ ಪಾತ್ರವು ಸಹ ಹಿರಿಯದಾಗಿದೆ. ಈ ಹಿರಿತನವನ್ನು ತಂದುಕೊಡಲು ಕಾರಣರು ಕರ್ನಾಟಕದ ಅನೇಕ ಸ್ವಾತಂತ್ರ್ಯ ಹೋರಾಟಗಾರರು. ಅಂಥವರಲ್ಲಿ ಶ್ರೀ ನರಸಿಂಹದಾಬಡೆಯವರು ಪ್ರಮುಖರು. ಅವರು ನಮ್ಮ ಮಧ್ಯೆ ಇಂದಿಗೂ ಇರುವುದು ನಮ್ಮೆಲ್ಲರಿಗೆ ಸಂತಸದ ವಿಷಯ. ಶ್ರೀ ದಾಬಡೆ ಅವರನ್ನು ಕುರಿತು ಶ್ರೀ ಮೋಹನ ನಾಗಮ್ಮನವರ್ ಅವರು **"ಸ್ವಾತಂತ್ರ್ಯ ಶರಣ್ಯರು"** ಎಂಬ ಹೆಸರಿನಲ್ಲಿ ಗ್ರಂಥವನ್ನು ಹೊರತಂದಿದ್ದಾರೆ. ಈ ಪುಸ್ತಕದಲ್ಲಿ ಶ್ರೀಮತಿ ಶಕುಂತಲಾ ದಾಬಡೆ ಹಾಗೂ ಶ್ರೀ ನರಸಿಂಹದಾಬಡೆಯವರ ಆತ್ಮ ವೃತ್ತಾಂತಗಳಿವೆ. ಈ ಪುಸ್ತಕವು ಸ್ವಾತಂತ್ರ್ಯೋತ್ತರ ಯುವ ಪೀಳಿಗೆಗೆ ಅತ್ಯಂತ ಉಪಯುಕ್ತಕರವಾಗಿದೆ. ಈ ಪುಸ್ತಕವನ್ನು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರು ಪ್ರಕಟಿಸಿದ್ದಾರೆ. 210 ಪುಟಗಳ ಈ ಪುಸ್ತಕದ ಬೆಲೆ 100/- ರೂಪಾಯಿಗಳು. ಆಸಕ್ತರು ಸಂಪರ್ಕಿಸಬೇಕಾದ ದೂರವಾಣಿಯ ಸಂಖ್ಯೆ 0836 2440283.

ಸಂತಾಪ

ಪ್ರಾಮಾಣಿಕರು, ಸತ್ಯನಿಷ್ಠರು, ಪರಿಶುದ್ಧರು ಆಗಿದ್ದ ಮತ್ತು ಬಡತನದ ಕಾರಣದಿಂದಾಗಿ ಶಾಲಾಶುಲ್ಕವನ್ನು ಕಟ್ಟಲಾಗದೆ ಬೆಂಚ್ ಮೇಲೆ ನಿಂತು ಶಿಕ್ಷೆ ಅನುಭವಿಸಿದ್ದ ಸಾಮಾನ್ಯ ಬಾಲಕನೊಬ್ಬ ಸ್ವ ಪರಿಶ್ರಮದಿಂದ ರಾಷ್ಟ್ರಪತಿಯಾಗಿ ತನ್ನ ಹಿರಿಯದಾದ ವ್ಯಕ್ತಿತ್ವವನ್ನು ನಮ್ರತೆಗಿಳಿಸಿ ರಾಷ್ಟ್ರಪತಿ ಸ್ಥಾನಕ್ಕೆ ಗೌರವ ತಂದ ಹಿಂದುಳಿದ ವರ್ಗಕ್ಕೆ ಸೇರಿದ್ದ ಕೆ.ಆರ್.ನಾರಾಯಣನ್ ದಿವಂಗತರಾದುದಕ್ಕಾಗಿ 'ಜನಪದ ವಿಚಾರ' ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ.......೨೫

"ಜೀವನದಲ್ಲಿ ಭಯಪಡಬೇಕಾದುದು ಯಾವುದೂ ಇಲ್ಲ. ಅದನ್ನು ಅರ್ಥಮಾಡಿಕೊಳ್ಳಬೇಕಷ್ಟೆ" –ಮೇರಿ ಕ್ಯೂರಿ



ಮದುವೆ ಮುಗಿಸಿಕೊಂಡು ನಾವೆಲ್ಲರು ಮೈಸೂರಿಗೆ ಹೋದೆವು ಅಲ್ಲಿ ಗೀತಾ ರಸ್ತೆಯಲ್ಲಿದ್ದ ಪರಿಚಿತರ ಮನೆಯಲ್ಲಿ ಉಳಿದುಕೊಂಡೆವು. ಅಲ್ಲಿ ಹಲವಾರು ದಿನಗಳನ್ನು ಕಳೆಯುವಷ್ಟರಲ್ಲಿ ನನಗೆ ಫಿಸ್ತೂಲ ಕಾಣಿಸಿಕೊಂಡಿತು. ಇದು ಮದುವೆಯ ಮುಂಚೆಯೆ ಸಣ್ಣದಾಗಿ ಇದ್ದುದು ಮದುವೆಯಾದ ನಂತರ ಉಲ್ಬಣಗೊಂಡಿತು.ಆದರೆ ಯಾವ ಚಿಕಿತ್ಸೆಯನ್ನೂ ಮಾಡಿಸಿಕೊಳ್ಳಲಿಲ್ಲ ಹಾಗೂ ಹೀಗೂ ಓಡಾಡಿಕೊಂಡಿದ್ದೆ. ನಂತರ ನಾವೆಲ್ಲರೂ ನಮ್ಮ ತಂದೆಯುವರು ಪೋಸ್ಟ್‌ಮಾಸ್ಟರ್ ಆಗಿ ಕೆಲಸ ಮಾಡಿಕೊಂಡಿದ್ದ ಕಿರ್ಲೋಸ್ಕರ್‌ವಾಡಿಗೆ ಪ್ರಯಾಣ ಬೆಳೆಸಿದವು. ಹುಬ್ಬಳ್ಳಿ, ಸಾಂಗ್ಲಿ, ಮಿರಜ್ ಮಾರ್ಗವಾಗಿ ರೈಲಿನಲ್ಲಿ ಕಿರ್ಲೋಸ್ಕರ್‌ವಾಡಿಗೆ ಹೋಗಬೇಕಾಗಿತ್ತು.ನಾವು ರೈಲಿನಲ್ಲಿ ಮೈಸೂರಿನಿಂದ ಪ್ರಯಾಣ ಪ್ರಾರಂಭಿಸಿದೊಡನೆ ಫಿಸ್ತೂಲ ಅತಿ ನೋವನ್ನು ಕೊಡಲು ಪ್ರಾರಂಭಿಸಿತು. ಕುಳಿತುಕೊಳ್ಳಲು ಸಾಧ್ಯವಿಲ್ಲವಾಯಿತು. ಆಗ ಮಲಗಿಕೊಂಡೆ ಪ್ರಯಾಣ ಮಾಡಬೇಕಾಯಿತು. ಮದುವೆಯಾದ ತಕ್ಷಣದಲ್ಲಿಯೆ ಈ ರೀತಿಯ ದೈಹಿಕ ತೊಂದರೆ ನನಗೆ ಉಂಟಾದುದು ನನ್ನ ತಂದೆ–ತಾಯಿಗಳಿಗೂ ಮತ್ತು ಆಗ ತಾನೆ ನನ್ನನ್ನೂ ಮದುವೆಯಾಗಿದ್ದ ಗಿರಿಜಾಳಿಗೂ ತುಂಬಾ ದು:ಖವಾಯಿತು. ರೈಲು ಅಕ್ಕಿಹೆಬ್ಬಾಳು ನಿಲ್ದಾಣದಲ್ಲಿ ನಿಂತಾಗ ನನ್ನ ಮಾವನವರು ಮತ್ತು ಭಾವಂದಿರು ಬಂದು ನಮ್ಮನ್ನು ಭೇಟಿ ಮಾಡಿದರು. ಕೃಷ್ಣರಾಜಪೇಟೆಯಲ್ಲಿದ್ದ ಅವರಿಗೆ ಹತ್ತಿರದ ರೈಲ್ವೆ ನಿಲ್ದಾಣ ಅಕ್ಕಿ ಹೆಬ್ಬಾಳವೇ ಆಗಿತ್ತು. ನೋವಿನಿಂದ ಬಹಳ ಒದ್ದಾಡುತ್ತಾ ಪ್ರಯಾಣ ಮಾಡಿ ಮೀರಜ್ ಜಂಕ್ಷನ್‌ನ್ನು ತಲುಪಿದೆವು. ಮೀರಜ್‌ನಲ್ಲಿ ರೈಲು ಬದಲಾಯಿಸಬೇಕಾಗಿತ್ತು. ಆದರೆ ನನಗೆ ನಡೆಯುವುದೇ ಕಷ್ಟವಾಗಿತ್ತು.

ಆದ್ದರಿಂದ ನನ್ನ ತಂದೆಯವರು ಮೀರಜ್ ಸ್ಟೇಷನ್ ಮಾಸ್ಟರ್‌ವರನ್ನು ಭೇಟಿ ಮಾಡಿ ಸ್ಟ್ರೆಚರ್ ಸೇವೆಯನ್ನು ಪಡೆದರು. ನನ್ನನ್ನು ಆ ಸ್ಟ್ರೆಚರ್ ಮೇಲೆ ಮಲಗಿಸಿ ಕಿರ್ಲೋಸ್ಕರ್‌ವಾಡಿಗೆ ಹೋಗುವ ರೈಲಿನಲ್ಲಿ ಮಲಗಿಸಿದರು. ಕಿರ್ಲೋಸ್ಕರ್‌ವಾಡಿಯನ್ನು ತಲುಪಿದ ನಂತರ ತುಂಬಾ ಕಷ್ಟಪಟ್ಟು ಮನೆಯನ್ನು ತಲುಪಿದೆ. ಅಲ್ಲಿಯ ವೈದ್ಯರನ್ನು ಕರೆಸಿ ಪರೀಕ್ಷೆ ಮಾಡಿಸಲಾಯಿತು. ಅವರು ನನ್ನ ನೋವಿನ ತಾತ್ಕಾಲಿಕ ಶಮನಕ್ಕಾಗಿ ಔಷಧೋಪಚಾರ ಮಾಡಿಸಿದರು. ಮುಂದೆ ಬಹಳ ದಿನಗಳವರೆಗೆ ಫಿಸ್ತೂಲದ ನೋವು ಉಲ್ಬಣಗೂಳ್ಳದೆ ಹಾಗೆಂಯೇ ಇತ್ತು. ಮುಂದೆ ಕಿರ್ಲೋಸ್ಕರ್‌ವಾಡಿಯಲ್ಲಿ ಒಂದು ತಿಂಗಳು ಇದ್ದು ನಾನು ಮತ್ತು ಗಿರಿಜಾ ಮೈಸೂರಿಗೆ ಹಿಂದಿರುಗಿದೆವು. ಫಿಸ್ತೂಲದ ನಿವಾರಣೆಗಾಗಿ ಶಸ್ತ್ರಕ್ರಿಯೆ ಮಾಡಿಸಿಕೊಳ್ಳಬೇಕೆಂದು ತೀರ್ಮಾನಿಸಿದೆ. ಆಗ ಮೈಸೂರಿನ ಇರ್ವಿನ್ ರಸ್ತೆಯಲ್ಲಿದ್ದ ಡಾ॥ ಪ್ರಸಾದ್ ನರ್ಸಿಂಗ್ ಹೋಂ ನಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡೆ. ಪ್ರಸಾದ್ ನರ್ಸಿಂಗ್ ಹೋಮ್‌ನ ಮಾಲೀಕರಾಗಿದ್ದ ಡಾ॥ ಆನಂದಿಬಾಯಿ ಸಾರ್ವಜನಿಕ ಜೀವನದಲ್ಲಿ ಆಸಕ್ತಿ ಹೊಂದಿದವರಾಗಿದ್ದರು. ಆಹೊತ್ತಿಗೆ ನನ್ನ ಪರಿಚಯವಾಗಿತ್ತು. ನಾನು ಸಹ ಓರ್ವ ಸಮಾಜ ಸೇವಕನೆಂದು ತಿಳಿದು ಶಸ್ತ್ರ ಚಿಕಿತ್ಸೆಯನ್ನು ಉಚಿತವಾಗಿ ನಡೆಯುವಂತೆ ನೆರವಾದರು. ಆಸಮಯದಲ್ಲಿ ಒಂದು ಆಶ್ಚರ್ಯಕರವಾದ ಸಂಗತಿ ನಡೆಯಿತು. ಅದೇ ನರ್ಸಿಂಗ್ ಹೋಮ್‌ನಲ್ಲಿ ಹೆರಿಗೆಗೆಂದು ಬಂದಿದ್ದ ಓರ್ವ ಶ್ರೀಮಂತನ ಮಗಳು ನಮ್ಮ ಪಕ್ಕದ ವಾರ್ಡಿನಲ್ಲಿ ಇದ್ದಳು. ಅವಳ ತಂದೆ ಆಗಾಗ್ಗೆ ಅವಳನ್ನು ಮತ್ತು ನವಜಾತಶಿಶುವನ್ನು ನೋಡಿಕೊಂಡು ಹೋಗಲು ಬರುತ್ತಿದ್ದರು. ನನ್ನ ಬಗ್ಗೆ ತಿಳಿದ ಅವರು ಸ್ವಯಂ ಪ್ರೇರಣೆಯಿಂದ ಗಿರಿಜಾ ಅವರ ಕೈಗೆ ಸುಮಾರು ೨೦೦೦ ರೂಪಾಯಿಗಳಷ್ಟು ಹಣವನ್ನು ದಾನವಾಗಿ ಕೊಟ್ಟರು. ಆ ಪುಣ್ಯಾತ್ಮನ ಸಹಾಯವನ್ನು ನಾನು ಇಂದಿಗೂ ನೆನೆಯುತ್ತೇನೆ. ಹೀಗೆ ಅಂತಿಮವಾಗಿ ಫಿಸ್ತೂಲದ ಸಮಸ್ಯೆಯಿಂದ ಬಿಡುಗಡೆ ಹೊಂದಿ ನರ್ಸಿಂಗ್ ಹೋಮ್ನಿಂದ ಹೊರ ಬಂದೆ. ಗಿರಿಜಾ ಮತ್ತು ನಾನು ಗಾಂಧಿ ಸ್ಮಾರಕ ನಿಧಿಯ ಕಾರ್ಯಕರ್ತರಾಗಿದ್ದವಷ್ಟೆ. ಈ ಸಮಯಕ್ಕೆ ಬಿಜಾಪುರ ಜಿಲ್ಲೆಯ

ಚಿಂಚಖಂಡಿಯಲ್ಲಿ ಗಾಂಧಿ ಸ್ಮಾರಕ ನಿಧಿ ಕಾರ್ಯಕರ್ತರ ಸಮಾವೇಶವೊಂದು ನಡೆಯಿತು. ಆ ಸಮಾವೇಶದಲ್ಲಿ ಭಾಗವಹಿಸಲು ನಾವಿಬ್ಬರು ಅಲ್ಲಿಗೆ ಹೋದೆವು. ಮೂರು ದಿನಗಳ ಆ ಸಮಾವೇಶವನ್ನು ಮುಗಿಸಿಕೊಂಡು ಹಿಂದಿರುಗುವಾಗ ಬೆಳಗಾಂ ಬಳಿಯ ಹುದಲಿ ಎಂಬ ಗ್ರಾಮಕ್ಕೆ ಹೋದೆವು. ಖಾದಿ ಕಾರ್ಯಕರ್ತರಿಗೆ ಹುದಲಿ ಒಂದು ಐತಿಹಾಸಿಕ ಸ್ಥಳ. ಈ ಗ್ರಾಮಕ್ಕೆ ಗಾಂಧೀಜಿಯವರು ೧೯೩೭ ರಲ್ಲಿ ಭೇಟಿ ಕೊಟ್ಟಿದ್ದರು. ಆಗ ಈ ಗ್ರಾಮದಲ್ಲಿ ಏಪ್ರಿಲ್ ೧೬ರಿಂದ೨೦ರವರೆಗೆ ಗಾಂಧಿ ಸೇವಾ ಸಂಘದ ಸಮ್ಮೇಳನ ನಡೆಯಿತು. ಒಂದು ವಾರ ನಡೆದ ಈ ಸಮ್ಮೇಳನದಲ್ಲಿ ಗಾಂಧೀಜಿಯವರು ಪಾಲ್ಗೊಂಡಿದ್ದರು. ಇವರಲ್ಲದೆ ಆ ಚಿಕ್ಕ ಗ್ರಾಮಕ್ಕೆ ಸಮ್ಮೇಳನದಲ್ಲಿ ಭಾಗವಹಿಸಲು ಕಿಶೋರ್‌ಲಾಲ್ ಮಶ್ರೂವಾಲ ಕಾಕಾಸಾಹೇಬ್ ಕಾಲೇಲ್ಕರ್, ಜಮನ್ ಲಾಲ್‌ಬಜಾಜ್, ಸರ್ದಾರ್ ವಲ್ಲಭಬಾಯಿ ಪಟೇಲ್, ಡಾ॥ ರಾಜೇಂದ್ರ ಪ್ರಸಾದ್, ಗಂಗಾಧರರಾವ್ ದೇಶಪಾಂಡೆ, ಖಾನ್ ಅಬ್ದುಲ್ ಗಫರ್‌ಖಾನ್, ಬಾಳುಭಾಯಿ, ದಾದಾ ಧರ್ಮಾಧಿಕಾರಿ, ರಂಗನಾಥ ದಿವಾಕರ್, ಹನುಮಂತರಾವ್ ಕೌಜಲಗಿ, ರಾಮಚಂದ್ರ ವಡವಿ, ಗುದ್ಲೆಪ್ಪ ಹಳ್ಳಿಕೇರಿ, ವಿ.ಟಿ, ಮಾಗಡಿ ಮುಂತಾದ ಅನೇಕ ಗಾಂಧೀ ಅನುಯಾಯಿಗಳು ಈ ಸಮ್ಮೇಳನದಲ್ಲಿ ಭಾಗವಃಇಸದ್ದರು. ಈ ಸಮ್ಮೇಳನದಲ್ಲಿ ಗಾಂಧೀಜಿ ಎರಡು–ಮೂರು ಸಂದರ್ಭಗಳಲ್ಲಿ ಭಾಷಣ ಮಾಡಿದ್ದರು. ಇಂಥ ಐತಿಹಾಸಿಕ ಹುದಲಿ ಗ್ರಾಮದಲ್ಲಿ ಆಗ ಗಾಂಧೀ ಸ್ಮಾರಕ ನಿಧಿಯ ಕಾರ್ಯಕರ್ತರಾಗಿ ವರಾಹಮೂರ್ತಿ ಎಂಬುವವರು ಸಂಸಾರಸಮೇತ ರಚನಾತ್ಮಕ ಕಾರ್ಯ ಮಾಡಿಕೊಂಡಿದ್ದರು. ಈ ಗ್ರಾಮದಲ್ಲಿ ನಾನು ಮತ್ತು ಗಿರಿಜಾ ಒಂದು ರಾತ್ರಿ ತಂಗಿದೆವು ನಮಗೆ ಎಲ್ಲ ವ್ಯವಸ್ಥೆಯನ್ನು ವರಾಹಮೂರ್ತಿ ಮಾಡಿದ್ದರು. ಮಾರನೆ ದಿನ ಬೆಳಿಗ್ಗೆ ಹುದಲಿ ಗ್ರಾಮದಲ್ಲಿ ಓಡಾಡಿ ಮತ್ತು ಗಾಂಧೀ ಸೇವಾ ಸಂಘದ ಸಮ್ಮೇಳನ ನಡೆದ ಸ್ಥಳವನ್ನು ನೋಡಿ ನಾವಿಬ್ಬರೂ ಕೃಷ್ಣರಾಜಪೇಟೆಗೆ ಹಿಂದಿರುಗಿದೆವು.

...........ಮುಂದುವರಿಯುವುದು

ಜನಪದ ಸೇವಾ ಟ್ರಸ್ಟ್ ಅಂಗಳ



ಸತೀಶ್ ದೇಸಾಯಿ. ಟ್ರಸ್ಟ್ ನಡೆಸುತ್ತಿರುವ ಕರುಣಾಗೃಹದ ಹಳೆಯ ವಿದ್ಯಾರ್ಥಿ. ಈಗ ಅವನು ಮೈಸೂರಿನ ಜೆ,ಎಸ್,ಎಸ್ ಅಂಗವಿಕಲರ ತಾಂತ್ರಿಕ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ಇತ್ತೀಚಿಗೆ ಪಂಜಾಬಿನ ಪತೇಪುರ್ ಸಾಹಿಬ್‌ನಲ್ಲಿ ನಡೆದ ಎಂಟನೆ ರಾಷ್ಟ್ರೀಯ ವಿದ್ಯಾರ್ಥಿ ಸಮ್ಮೇಳನದಲ್ಲಿ 'ಶ್ರೇಷ್ಠ ವಿದ್ಯಾರ್ಥಿ'ಎಂಬ ಪ್ರಶಸ್ತಿ ಪಡೆದಿದ್ದಾನೆ. ಈ ಪ್ರಶಸ್ತಿ ಪಡೆದ ರಾಷ್ಟ್ರದ ಪ್ರಥಮ ಅಂಗವಿಕಲ ವಿದ್ಯಾರ್ಥಿಯೂ ಸಹ ಆಗಿದ್ದಾನೆ. ಸತೀಶ್ ದೇಸಾಯಿಗೆ ಟ್ರಸ್ಟಿನ ಹಾರ್ದಿಕ ಅಭಿನಂದನೆಗಳು. ಟ್ರಸ್ಟಿನ ಪ್ರೀತಿಯ ವಲಯದಲ್ಲಿ ಹತ್ತಾರು ಯುವಕರು ಇರುವುದು ಟ್ರಸ್ಟಿನ ಒಂದು ವಿಶೇಷತೆ. ಅಂಥವರಲ್ಲಿ ಕೆ.ಪಿ. ಸುರೇಶ್‌ರವರು ಒಬ್ಬರು. ಇಂಗ್ಲಿಷ್ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದಾರೆ. ಈಗ ಮಲೆನಾಡಿನ ಕಾಡಿನಲ್ಲಿ ಕಂಜರ್ಪಣೆ ಎಂಬಲ್ಲಿ ವ್ಯವಸಾಯ ಮಾಡಿಕೊಂಡಿದ್ದಾರೆ. ಒಂದು ಸಮಯದಲ್ಲಿ ಜನಪದ ವಿಚಾರದ ಸಹ ಸಂಪಾದಕರಾಗಿಯೂ ಕೆಲಸ ಮಾಡಿದ್ದರು. ಅವರ ಕವನ ಸಂಕಲನವು ಪ್ರಕಟವಾಗಿದೆ. ಇತ್ತೀಚಿಗೆ ಯುನೆಸ್ಕೊ ಮತ್ತು ಕೊರಿಯಾ ಸರ್ಕಾರಗಳ ಮಧ್ಯ ಆಗಿರುವ ಒಪ್ಪಂದದ ಮೇರೆಗೆ ಅಂತರಾಷ್ಟ್ರೀಯ ಶಾಂತಿ ತಿಳುವಳಿಕೆ ಕುರಿತಂತೆ ಏಷ್ಯಾ ಮತ್ತು ಫೆಸಿಪಿಕ್‌ನ ೪೬ ದೇಶಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ವಿಷಯದಲ್ಲಿ ಶ್ರೀ ಕೆ,ಪಿ.ಸುರೇಶ್‌ರವರು ಸಹ ಆಯ್ಕೆಗೊಂಡಿದ್ದರು. ಜನಪದ ಸೇವಾ ಟ್ರಸ್ಟಿನ ೨೦೦೪-೦೫ನೇ ಸಾಲಿನ ಲೆಕ್ಕಪತ್ರ್ರಗಳು ಆಡಿಟ್ ಆಗಿವೆ. ಇವುಗಳನ್ನು ಮೈಸೂರಿನಲ್ಲಿರುವ ಚಾರ್ಟರ್ಡ್ ಆಕೌಂಟೆಂಟ್ ಶ್ರೀ ಅನಂತವರ್ಧನ್‌ರವರು ಆಡಿಟ್ ಮಾಡಿದ್ದಾರೆ.

***

(ಇದು ೨೦೦೫ ನವಂಬರ್ ಮಾಹೆಗೆ ಸಂಬಂಧಿಸಿದ ವಿಶಯ)

ವಾಚಕ ಮಿತ್ರರಲ್ಲಿ ವಿನಂತಿ.

ಜನಪದ ವಿಚಾರ ಪ್ರಸ್ತುತ ವಿಷಯಗಳಿಗೆ ಸಂಬಂಧಿಸಿದಂತೆ ಲೇಖನಗಳನ್ನು ಆಹ್ವಾನಿಸುತ್ತದೆ. ಆಸಕ್ತರು ಪತ್ರಿಕೆಯನ್ನು ಸಂಪರ್ಕಿಸಬೇಕಾಗಿ ವಿನಂತಿ.

ತಾವು ದಯಮಾಡಿ "ಜನಪದ ವಿಚಾರದ ವಾರ್ಷಿಕ ಚಂದಾ ೧೦೦/- ರೂ. ಮನಿಆರ್ಡರ್ ಮೂಲಕ ಕಳುಹಿಸಿ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

–ಪ್ರಕಾಶಕರು



ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

KA-SKMND-470-2003-05
Regd. no. KAR/KAN/2000/3820

ತೆರೆದ–ಅಂಚೆ

TO,

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ® . Melkote. Dist- mandya – 571431

Phone : 08236 – 298754 e-mail : janapada@yahoo.com